ಅನುಬಂಧ – II

ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2010
(2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 9)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನು ಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರು ವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತ ವಾಗಲಿ, ಎಂದರೆ:–

1. ಸಂಕ್ಷಿಪ್ತ, ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2010 ಎಂದು ಕರೆಯತಕ್ಕದ್ದು.

(2) ಇದು 2010ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 1957ರ ಕರ್ನಾಟಕ ಅಧಿನಿಯಮ 25ರ ತಿದ್ದುಪಡಿ.– ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 25),–

(1) 2ನೇ ಪ್ರಕರಣದ, (1)ನೇ ಉಪಪ್ರಕರಣದಲ್ಲಿ,

(ಎ) (ಕೆ) ಖಂಡದಲ್ಲಿ, (vi) ನೇ ಉಪ ಖಂಡದ ತರುವಾಯ, ಈ ಮುಂದಿನ ಉಪ ಖಂಡವನ್ನು 1983ರ ಫೆಬ್ರವರಿ ಎರಡನೇ ದಿನದಿಂದ ಜಾರಿಗೆ ಬರುವಂತೆ ಸೇರಿಸತಕ್ಕದ್ದು ಹಾಗೂ ಹಾಗೆ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:–

"(vi-1) ನಗದಿಗಾಗಿ, ಮುಂದಕ್ಕೆ ಹಾಕಲಾದ ಸಂದಾಯಕ್ಕಾಗಿ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ತನ್ನ ಸದಸ್ಯರಿಗೆ ಸರಕುಗಳನ್ನು ಸರಬರಾಜು ಮಾಡುವ ನಿಗಮಿತವಲ್ಲದ ಸಂಘ ಅಥವಾ ವ್ಯಕ್ತಿಗಳ ನಿಕಾಯ;"

(ಬಿ) (ಟಿ) ಖಂಡದಲ್ಲಿ,

(i) (iv) ನೇ ಉಪಖಂಡದ ತರುವಾಯ, ಈ ಮುಂದಿನದನ್ನು 1983ರ ಫೆಬ್ರವರಿ ಎರಡನೇ ದಿನದಿಂದ ಜಾರಿಗೆ ಬರುವಂತೆ ಸೇರಿಸತಕ್ಕದ್ದು ಮತ್ತು ಹಾಗೆ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:–

"(v) ಯಾವುದೇ ನಿಗಮಿತವಲ್ಲದ ಸಂಘ ಅಥವಾ ವ್ಯಕ್ತಿಗಳ ನಿಕಾಯವು ಅದರ ಒಬ್ಬ ಸದಸ್ಯನಿಗೆ ನಗದಿಗಾಗಿ, ಮುಂದಕ್ಕೆ ಹಾಕಲಾದ ಸಂದಾಯಕ್ಕಾಗಿ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಸರಕುಗಳ ಸರಬರಾಜು;

(vi) ಯಾವುದೇ ಸೇವೆಯ ರೂಪದಲ್ಲಿ ಅಥವಾ ಅದರ ಭಾಗವಾಗಿ ಅಥವಾ ಯಾವುದೇ ಇತರ ರೀತಿಯಲ್ಲಿ, ಮಾನವನ ಬಳಕೆಗಾಗಿನ ಆಹಾರ ಅಥವಾ ಯಾವುದೇ ಇತರ ವಸ್ತು ಅಥವಾ ಯಾವುದೇ ಪಾನೀಯದ (ಮಾದಕ ಪಾನೀಯ ವಾಗಿರಲಿ ಅಥವಾ ಆಗಿಲ್ಲದಿರಲಿ), ಸರಬರಾಜು, ಅಂಥ ಸರಬರಾಜು ಅಥವಾ ಸೇವೆಯು ನಗದಿಗಾಗಿ, ಮುಂದಕ್ಕೆ ಹಾಕಲಾದ ಸಂದಾಯಕ್ಕಾಗಿ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಆಗಿದ್ದಲ್ಲಿ, ಮತ್ತು ಆ ಸರಕುಗಳ ವರ್ಗಾವಣೆ, ಬಟವಾಡೆ ಅಥವಾ ಸರಬರಾಜು ಮಾಡುವ ವ್ಯಕ್ತಿಯು ಮಾಡಿದ ಅಂಥ ಯಾವುದೇ ಸರಕುಗಳ ವರ್ಗಾವಣೆ, ಬಟವಾಡೆ ಅಥವಾ ಸರಬರಾಜನ್ನು, ಮತ್ತು ಆ ಸರಕುಗಳು ಯಾರಿಗೆ ವರ್ಗಾವಣೆ, ಬಟವಾಡೆ ಅಥವಾ ಸರಬರಾಜು ಮಾಡಲಾಗಿದೆಯೋ ಆ ವ್ಯಕ್ತಿಯು ಮಾಡಿದ ಖರೀದಿಯನ್ನು ಮಾರಾಟವೆಂದು ಭಾವಿಸತಕ್ಕದ್ದು."

(ii) **ವಿವರಣೆ** 3–ಎ ಅನ್ನು 1983ರ ಫೆಬ್ರವರಿ ಎರಡನೇ ದಿನದಿಂದ ಜಾರಿಗೆ ಬರುವಂತೆ ಬಿಟ್ಟುಬಿಡತಕ್ಕದ್ದು ಹಾಗೂ ಹಾಗೆ ಬಿಟ್ಟುಬಿಡಲಾಗಿದೆ ಎಂದು ಭಾವಿಸತಕ್ಕದ್ದು.

(2) 12ನೇ ಪ್ರಕರಣದಲ್ಲಿ,

(ಎ) (1)ನೇ ಉಪಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಆಯುಕ್ತರು ಅಧಿಸೂಚಿಸಬಹುದಾದ ವ್ಯಾಪಾರಿಗಳ ನಿರ್ದಿಷ್ಟ ವರ್ಗವು, (1)ನೇ ಉಪಪ್ರಕರಣದಡಿಯಲ್ಲಿಯ ವಿವರಪಟ್ಟಿಯ (ರಿಟರ್ನ್) ಆಧಾರದ ಮೇಲೆ ಪಾವತಿಸಬೇಕಾದ ತೆರಿಗೆಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಂದಾಯ ಮಾಡತಕ್ಕದ್ದು."

(ಬಿ) (1–ಎ) ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಆಯುಕ್ತರು ಅಧಿಸೂಚಿಸಬಹುದಾದ ವ್ಯಾಪಾರಿಗಳ ನಿರ್ದಿಷ್ಟ ವರ್ಗವು, (1)ನೇ ಉಪಪ್ರಕರಣದಡಿಯಲ್ಲಿಯ ವಿವರ ಪಟ್ಟಿಯ ಆಧಾರದ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯನ್ನು, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ, ಸಂದಾಯ ಮಾಡತಕ್ಕದ್ದು."

(3) 12–ಬಿ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ ನಾಲ್ಕನೇ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತೂ ಪರಂತು, ಆಯುಕ್ತರು ಅಧಿಸೂಚಿಸಬಹುದಾದ ವ್ಯಾಪಾರಿಗಳ ನಿರ್ದಿಷ್ಟ ವರ್ಗವು, ನಿಯಮಿಸಿದ ನಮೂನೆಯಲ್ಲಿ ವಿವರಣ ಪಟ್ಟಿಯನ್ನು ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸತಕ್ಕದ್ದು ಮತ್ತು ವಿವರಣ ಪಟ್ಟಿಯ ಆಧಾರದ ಮೇಲೆ ಸಂದಾಯ ಮಾಡತಕ್ಕ ತೆರಿಗೆಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು."

(5) 25–ಬಿ ಪ್ರಕರಣದಲ್ಲಿ,

(ಎ) (3)ನೇ ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಆಯುಕ್ತರು ಅಧಿಸೂಚಿಸಬಹುದಾದ ವ್ಯಾಪಾರಿಗಳ ನಿರ್ದಿಷ್ಟ ವರ್ಗವು, ನಿಯಮಿಸಲಾದ ನಮೂನೆಯಲ್ಲಿ ವಿವರಪಟ್ಟಿಯನ್ನು,

ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸತಕ್ಕದ್ದು."

(ಬಿ) (4)ನೇ ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು ಆಯುಕ್ತರು ಅಧಿಸೂಚಿಸಬಹುದಾದ ವ್ಯಾಪಾರಿಗಳ ನಿರ್ದಿಷ್ಟ ವರ್ಗವು, (1)ನೇ ಉಪಪ್ರಕರಣದಡಿಯಲ್ಲಿ ಪಾವತಿಸಬೇಕಾದ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು ಮತ್ತು (2)ನೇ ಉಪಪ್ರಕರಣದಡಿಯಲ್ಲಿ ಪಾವತಿಸಬೇಕಾದ ಉಪಕರಣವನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು."

(2) 9ನೇ ಪ್ರಕರಣದಲ್ಲಿ, (1) ನೇ ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಆಯುಕ್ತರು ಅಧಿಸೂಚಿಸಬಹುದಾದಂತೆ ಮನೋರಂಜನೆಗಳ ಮಾಲೀಕರ ನಿರ್ದಿಷ್ಟ ವರ್ಗವು, ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ತೆರಿಗೆ ಅಥವಾ ಯಾವುದೇ ಇತರ ಮೊತ್ತವನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಂದಾಯ ಮಾಡತಕ್ಕದ್ದು."

4. 1976ರ ಕರ್ನಾಟಕ ಅಧಿನಿಯಮ 35ರ ತಿದ್ದುಪಡಿ. – ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರಲ್ಲಿ (1976ರ ಕರ್ನಾಟಕ ಅಧಿನಿಯಮ 35),

(1) 6ನೇ ಪ್ರಕರಣದಲ್ಲಿ,

(ಎ) (1)ನೇ ಉಪಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ನಿಯೋಜಕರ ನಿರ್ದಿಷ್ಟ ವರ್ಗವು, ನಿಯಮಿಸಲಾದ ನಮೂನೆಯಲ್ಲಿಯ ವಿವರ ಪಟ್ಟಿಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸತಕ್ಕದ್ದು."

(ಬಿ) (2)ನೇ ಉಪಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ನಿಯೋಜಕರ ನಿರ್ದಿಷ್ಟ ವರ್ಗವು, (1)ನೇ ಉಪಪ್ರಕರಣದಡಿಯಲ್ಲಿನ ವಿವರಪಟ್ಟಿಯ ಆಧಾರದ ಮೇಲೆ ಪಾವತಿಸಬೇಕಾದ ತೆರಿಗೆಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು."

(2) 6–ಎ ಪ್ರಕರಣದಲ್ಲಿ,

(ಎ) (1)ನೇ ಉಪಪ್ರಕರಣದಲ್ಲಿ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ನಿಯೋಜಕರ ನಿರ್ದಿಷ್ಟ ವರ್ಗವು, ನಿಯಮಿಸಲಾದ ನಮೂನೆಯಲ್ಲಿಯ ವಿವರ ಪಟ್ಟಿಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸತಕ್ಕದ್ದು."

(ಬಿ) (2)ನೇ ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ನಿಯೋಜಕರ ನಿರ್ದಿಷ್ಟ ವರ್ಗವು, (1)ನೇ ಉಪಪ್ರಕರಣದಡಿಯಲ್ಲಿನ ವಿವರಪಟ್ಟಿಯ ಆಧಾರದ ಮೇಲೆ ಪಾವತಿಸಬೇಕಾದ ತೆರಿಗೆಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು."

(3) 10ನೇ ಪ್ರಕರಣದಲ್ಲಿ,

(ಎ) (1)ನೇ ಉಪಪ್ರಕರಣದಲ್ಲಿ, ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ಹೆಸರು ದಾಖಲಾದ ವ್ಯಕ್ತಿಗಳ ನಿರ್ದಿಷ್ಟ ವರ್ಗವು, ಪಾವತಿಸಬೇಕಾದ ತೆರಿಗೆಯನ್ನು ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು, ಹಾಗೆಯೇ ನಿಯಮಿಸಬಹುದಾದ ನಮೂನೆಯಲ್ಲಿ ವಿವರಪಟ್ಟಿಯನ್ನು, ಸದರಿ

ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸತಕ್ಕದ್ದು."

(ಬಿ) (5)ನೇ ಉಪಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ಹೆಸರು ದಾಖಲಾದ ವ್ಯಕ್ತಿಗಳ ನಿರ್ದಿಷ್ಟ ವರ್ಗವು, ನಿಯಮಿಸಬಹುದಾದ ನಮೂನೆಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ವಿವರ ಪಟ್ಟಿಯನ್ನು ಸಲ್ಲಿಸತಕ್ಕದ್ದು, ಹಾಗೆಯೇ ವಿವರಪಟ್ಟಿಯ ಆಧಾರದ ಮೇಲೆ ಕಡಿತಗೊಳಿಸಿದ ತೆರಿಗೆಯ ಮೊತ್ತವನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು."

5. 1979ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.– ಕರ್ನಾಟಕ ವಿಲಾಸಗಳ ಮೇಲೆ ತೆರಿಗೆ ಅಧಿನಿಯಮ, 1979ರಲ್ಲಿ (1979ರ ಕರ್ನಾಟಕ ಅಧಿನಿಯಮ 22),–

(1) 3ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದಲ್ಲಿ,

(ಎ) ಕ್ರಮ ಸಂಖ್ಯೆ 2ಕ್ಕೆ ಸಂಬಂಧಿಸಿದ ನಮೂದುಗಳಲ್ಲಿ, "ಅಂಥ ಚಾರ್ಜುಗಳ ಶೇಕಡಾ ಆರರಷ್ಟು" ಎಂಬ ಪದಗಳಿಗೆ "ಅಂಥ ಚಾರ್ಜುಗಳ ಶೇಕಡಾ ಎಂಟರಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಕ್ರಮ ಸಂಖ್ಯೆ 3ಕ್ಕೆ ಸಂಬಂಧಿಸಿದ ನಮೂದುಗಳಲ್ಲಿ, "ಅಂಥ ಚಾರ್ಜುಗಳ ಶೇಕಡಾ ಹತ್ತರಷ್ಟು" ಎಂಬ ಪದಗಳಿಗೆ "ಅಂಥ ಚಾರ್ಜುಗಳ ಶೇಕಡಾ ಹನ್ನೆರಡರಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(2) 5ನೇ ಪ್ರಕರಣದಲ್ಲಿ,

(ಎ) (1)ನೇ ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು ಆಯುಕ್ತರು ಅಧಿಸೂಚಿಸಬಹುದಾದಂತೆ, ಮಾಲೀಕರುಗಳ ನಿರ್ದಿಷ್ಟ ವರ್ಗವು, ನಿಯಮಿಸಬಹುದಾದ ನಮೂನೆಯಲ್ಲಿ ವಿವರಪಟ್ಟಿಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸತಕ್ಕದ್ದು."

(ಬಿ) (2)ನೇ ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು ಆಯುಕ್ತರು ಅಧಿಸೂಚಿಸಬಹುದಾದಂತೆ, ಮಾಲೀಕರುಗಳ ನಿರ್ದಿಷ್ಟ ವರ್ಗವು; (1)ನೇ ಉಪಪ್ರಕರಣದಡಿಯಲ್ಲಿನ ವಿವರಪಟ್ಟಿಯ ಆಧಾರದ ಮೇಲೆ ಪಾವತಿ ಮಾಡಬೇಕಾದ ತೆರಿಗೆಯನ್ನು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು."

(3) 5–ಎ ಪ್ರಕರಣದಲ್ಲಿ,

(ಎ) (1)ನೇ ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು ಆಯುಕ್ತರು ಅಧಿಸೂಚಿಸಬಹುದಾದಂತೆ, ಮಾಲೀಕರುಗಳ ನಿರ್ದಿಷ್ಟ ವರ್ಗವು, ನಿಯಮಿಸಲಾದ ನಮೂನೆಯಲ್ಲಿ ವಿವರಪಟ್ಟಿಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸತಕ್ಕದ್ದು."

(ಬಿ) (2)ನೇ ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು ಆಯುಕ್ತರು ಅಧಿಸೂಚಿಸಬಹುದಾದಂತೆ, ಮಾಲೀಕರುಗಳ ನಿರ್ದಿಷ್ಟ ವರ್ಗವು, (1)ನೇ ಉಪಪ್ರಕರಣದಡಿಯಲ್ಲಿನ ವಿವರಪಟ್ಟಿಯ ಆಧಾರದ ಮೇಲೆ ಪಾವತಿಸಬೇಕಾದ ತೆರಿಗೆಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು."

(4) 8ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು ಆಯುಕ್ತರು ಅಧಿಸೂಚಿಸಬಹುದಾದಂತೆ, ಮಾಲೀಕರುಗಳ ನಿರ್ದಿಷ್ಟ ವರ್ಗವು, ಈ ಅಧಿನಿಯಮದಡಿಯಲ್ಲಿ ಬಾಕಿಯಿರುವ ತೆರಿಗೆ ಅಥವಾ ಯಾವುದೇ ಇತರ ಮೊತ್ತವನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು."

(5) 11–ಎ ಪ್ರಕರಣದಲ್ಲಿ, (1)ನೇ ಉಪ ಪ್ರಕರಣದಲ್ಲಿ, "ಅರವತ್ತು ದಿನಗಳು" ಎಂಬ ಪದಗಳಿಗೆ, ಅವು ಬರುವ ಎರಡು ಕಡೆಗಳಲ್ಲಿ "ಒಂದು ನೂರಾ ಎಂಬತ್ತು ದಿನಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

6. 1979ರ ಕರ್ನಾಟಕ ಅಧಿನಿಯಮ 27ರ ತಿದ್ದುಪಡಿ.– ಕರ್ನಾಟಕ ಸರಕುಗಳ ಪ್ರವೇಶದ ಮೇಲೆ ತೆರಿಗೆ ಅಧಿನಿಯಮ, 1979ರಲ್ಲಿ (1979ರ ಕರ್ನಾಟಕ ಅಧಿನಿಯಮ 27),–

(1) 5ನೇ ಪ್ರಕರಣದಲ್ಲಿ,

(ಎ) (1)ನೇ ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ ವ್ಯಾಪಾರಿಗಳ ನಿರ್ದಿಷ್ಟ ವರ್ಗವು, ನಿಯಮಿಸಲಾದ ನಮೂನೆಯಲ್ಲಿ ವಿವರಪಟ್ಟಿಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ, ಸಲ್ಲಿಸತಕ್ಕದ್ದು."

(ಬಿ) (2)ನೇ ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ ವ್ಯಾಪಾರಿಗಳ ನಿರ್ದಿಷ್ಟ ವರ್ಗವು, (1)ನೇ ಉಪಪ್ರಕರಣದಡಿಯಲ್ಲಿನ ವಿವರಪಟ್ಟಿಯ ಆಧಾರದ ಮೇಲೆ ಪಾವತಿಸಬೇಕಾದ ತೆರಿಗೆಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ, ಜಮೆ ಮಾಡತಕ್ಕದ್ದು."

(2) 7ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ ವ್ಯಾಪಾರಿಗಳ ನಿರ್ದಿಷ್ಟ ವರ್ಗವು, ನಿಯಮಿಸಲಾದ ನಮೂನೆಯಲ್ಲಿ ವಿವರಪಟ್ಟಿಯನ್ನು, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ, ಸಲ್ಲಿಸತಕ್ಕದ್ದು, ಹಾಗೆಯೇ ವಿವರಪಟ್ಟಿಯ ಆಧಾರದ ಮೇಲೆ ಪಾವತಿಸಬೇಕಾದ ತೆರಿಗೆಯನ್ನು ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ಜಮೆ ಮಾಡತಕ್ಕದ್ದು."

(4) 8–ಎ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"8–ಬಿ ಸಕ್ಕರೆಯ ಸಂಬಂಧದಲ್ಲಿ ತೆರಿಗೆಯನ್ನು ಮೂಲದಲ್ಲಿಯೇ ಸಂದಾಯ ಮಾಡುವುದು.– (1) 7 ಮತ್ತು 8ನೇ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯದಲ್ಲಿ ಉತ್ಪಾದಕರಿಂದ ಸಕ್ಕರೆಯನ್ನು ಖರೀದಿಸುವ ಪ್ರತಿಯೊಬ್ಬ ವ್ಯಾಪಾರಿಯು, ಅಂಥ ಸಕ್ಕರೆಯ ಉತ್ಪಾದಕನಿಗೆ, ಅಂಥ ವ್ಯಾಪಾರಿಯು ರಾಜ್ಯದಲ್ಲಿನ ಸ್ಥಳೀಯ ಪ್ರದೇಶದೊಳಗೆ ಹಾಗೆ ಖರೀದಿಸಿದ ಸಕ್ಕರೆಯ ಪ್ರವೇಶದ ಮೇಲೆ ಅಧಿನಿಯಮದಡಿ ಅಂಥ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಗೆ ಸಮನಾದ ಮೊತ್ತವನ್ನು ಸಂದಾಯ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದಡಿಯಲ್ಲಿ, ನಿರ್ದಿಷ್ಟಪಡಿಸಿದಂತೆ ಖರೀದಿದಾರನು ಯಾರಿಗೆ ಪಾವತಿ ಮಾಡಬೇಕಾಗಿದೆಯೋ, ಆ ಪ್ರತಿಯೊಬ್ಬ ಸಕ್ಕರೆ ಉತ್ಪಾದಕನು, ತನಗೆ ಅಂಥ ಮೊತ್ತವು ಸಂದಾಯವಾದ ತರುವಾಯವೇ ಖರೀದಿದಾರನಿಗೆ ಸಕ್ಕರೆಯನ್ನು ಬಟವಾಡೆ ಮಾಡತಕ್ಕದ್ದು ಮತ್ತು ಅಂಥ ಮೊತ್ತವನ್ನು ಸಂದಾಯ ಮಾಡದೇ ಸಕ್ಕರೆಯನ್ನು ಬಟವಾಡೆ ಮಾಡಿದ್ದಲ್ಲಿ, ಆ ಅಧಿನಿಯಮದಡಿಯಲ್ಲಿ ಅಂಥ ಸಕ್ಕರೆ ಉತ್ಪಾದಕನಿಂದ ಬಾಕಿಯಿರುವ ಮೊತ್ತವೆಂದು ಭಾವಿಸತಕ್ಕದ್ದು.

(3) ರಾಜ್ಯದಲ್ಲಿನ ಪ್ರತಿಯೊಬ್ಬ ಸಕ್ಕರೆ ಉತ್ಪಾದಕನು, ಹಿಂದಿನ ತಿಂಗಳಿನ ಅವಧಿಯಲ್ಲಿ (1)ನೇ ಉಪಪ್ರಕರಣದಲ್ಲಿ ತನಗೆ ಸಂದಾಯವಾದ ತೆರಿಗೆಯ ವಿವರಗಳನ್ನು ಒಳಗೊಂಡ, ನಿಯಮಿಸಲಾದ ನಮೂನೆಯಲ್ಲಿ ಒಂದು ವಿವರಪಟ್ಟಿಯನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಪ್ರತಿ ತಿಂಗಳು ಸಲ್ಲಿಸತಕ್ಕದ್ದು ಮತ್ತು ಅಂಥ ಸಂದಾಯವನ್ನು ಮಾಡಿರುವ ಹಿಂದಿನ ತಿಂಗಳು ಮುಕ್ತಾಯವಾದ ತರುವಾಯ ಇಪ್ಪತ್ತು ದಿನಗಳೊಳಗೆ ತನಗೆ ಹಾಗೆ ಸಂದಾಯವಾದ ಮೊತ್ತವನ್ನು ಜಮೆ ಮಾಡುವುದು ಮತ್ತು ಹಾಗೆ ಜಮೆ ಮಾಡಬೇಕಾದ ಮೊತ್ತವನ್ನು ಈ ಅಧಿನಿಯಮದಡಿ ಬಾಕಿ ಮೊತ್ತವೆಂದು ಭಾವಿಸತಕ್ಕದ್ದು:

ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ಉತ್ಪಾದಕರ ನಿರ್ದಿಷ್ಟ ವರ್ಗವು, ನಿಯಮಿಸಲಾದ ನಮೂನೆಯಲ್ಲಿ ವಿವರಪಟ್ಟಿಯನ್ನು ವಿದ್ಯುನ್ಮಾನ ವಿಧಾನದಲ್ಲಿ ಸಲ್ಲಿಸತಕ್ಕದ್ದು ಮತ್ತು ಅಂಥ ವಿವರಪಟ್ಟಿಯ

ಆಧಾರದ ಮೇಲೆ ಪಾವತಿಸಬೇಕಾದ ತೆರಿಗೆಯ ಮೊತ್ತವನ್ನು, ವಿದ್ಯುನ್ಮಾನದ ವಿಧಾನದಲ್ಲಿ ಅಂತರ್ಜಾಲದ ಮೂಲಕ, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಜಮೆ ಮಾಡತಕ್ಕದ್ದು.

(4) (3)ನೇ ಉಪಪ್ರಕರಣದಲ್ಲಿ ಯಾರಿಗೆ ಸಂದಾಯ ಮಾಡಲಾಗಿದೆಯೋ, ಆ ಸಕ್ಕರೆಯ ಉತ್ಪಾದಕನು, ಅಂಥ ಸಂದಾಯವನ್ನು ಮಾಡಿದ ಖರೀದಿದಾರನಿಗೆ, ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡ, ನಿಯಮಿಸಲಾದ ಪ್ರಾಧಿಕಾರದಿಂದ ಪಡೆಯಲಾದ ಒಂದು ಪ್ರಮಾಣ ಪತ್ರವನ್ನು ಒದಗಿಸತಕ್ಕದ್ದು.

(5) (1)ನೇ ಉಪಪ್ರಕರಣದ ಅನುಸಾರವಾಗಿನ ಸಂದಾಯವು, ಖರೀದಿಸಿದ ಸಕ್ಕರೆಯ ಪ್ರವೇಶದ ಮೇಲೆ ಖರೀದಿಸುವ ವ್ಯಾಪಾರಿಯಿಂದ ಈ ಅಧಿನಿಯಮದಡಿಯಲ್ಲಿ ಬಾಕಿಯಿರುವ ತೆರಿಗೆಯ ವಸೂಲಿಯ ಇತರ ಯಾವುದೇ ರೀತಿಗೆ ಬಾಧಕವಾಗತಕ್ಕದ್ದಲ್ಲ.

(6) (3)ನೇ ಉಪಪ್ರಕರಣದ ಅಡಿಯಲ್ಲಿ ಖರೀದಿಸಿದ ಸಕ್ಕರೆಯ ಸಂಬಂಧದಲ್ಲಿ ತೆರಿಗೆಯನ್ನು ಜಮೆ ಮಾಡಿದ್ದಲ್ಲಿ, ಖರೀದಿಸುವ ವ್ಯಾಪಾರಿಯು ಅಂಥ ಸಕ್ಕರೆಯ ಪ್ರವೇಶದ ಮೇಲೆ, ಪಾವತಿ ಮಾಡಬೇಕಾದ ತೆರಿಗೆ ಅಥವಾ ಅಂಥ ಸಕ್ಕರೆಯ ಖರೀದಿಯ ಸಂಬಂಧದಲ್ಲಿ, ಸಂದಾಯ ಮಾಡಬೇಕಿಲ್ಲದ ಯಾವುದೇ ತೆರಿಗೆಯನ್ನು, ಖರೀದಿ ವ್ಯಾಪಾರಿಯು ಸಂದಾಯ ಮಾಡಬೇಕಾದ ಇತರ ಯಾವುದೇ ತೆರಿಗೆಯನ್ನು, ಸದರಿ ಉಪಪ್ರಕರಣದಡಿಯಲ್ಲಿ ಈಗಾಗಲೇ ಜಮೆ ಮಾಡಲಾದ ತೆರಿಗೆಯ ಮೊತ್ತದಿಂದ ಕಡಿತಗೊಳಿಸತಕ್ಕದ್ದು.

(7) ಸಕ್ಕರೆಯ ಅಂಥ ಪ್ರವೇಶದ ಮೇಲಿನ ತೆರಿಗೆಯನ್ನು, ಈಗಾಗಲೇ ಜಮೆ ಮಾಡಲಾಗಿದೆ ಎಂಬುದನ್ನು ರುಜುವಾತು ಪಡಿಸುವ ಮತ್ತು ಹಾಗೆ ಜಮೆ ಮಾಡಿದ ತೆರಿಗೆಯ ಖಚಿತ ಮೊತ್ತವನ್ನು ಸ್ಥಾಪಿಸುವ ಭಾರವು ರಿಯಾಯಿತಿಯನ್ನು ಕ್ಲೇಮು ಮಾಡುವ ವ್ಯಾಪಾರಿಯ ಮೇಲಿರುತ್ತದೆ."

(5) 12–ಸಿ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ, "ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 25) 4ನೇ ಪ್ರಕರಣದ" ಎಂಬ ಪದಗಳು, ಅಂಕಿಗಳು ಮತ್ತು ಆವರಣ

ಚಿಹ್ನೆಗಳಿಗೆ, "ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ (2004ರ ಕರ್ನಾಟಕ ಅಧಿನಿಯಮ 32) 60ನೇ ಪ್ರಕರಣ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

7. **ಕರನಿರ್ಧರಣೆಯ ಸಿಂಧುತ್ವ ಇತ್ಯಾದಿ.**– ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಇದಕ್ಕೆ ವಿರುದ್ಧವಾದುದ್ದು ಏನೇ ಇದ್ದರೂ, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 25) (ಇದರಲ್ಲಿ ಇನ್ನು ಮುಂದೆ ಸದರಿ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ಉಪಬಂಧಗಳ ಅಡಿಯಲ್ಲಿ ಕೈಗೊಂಡ ಅಥವಾ ಮಾಡಿದ ಅಥವಾ ಕೈಗೊಳ್ಳಲಾಗಿದೆ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕ್ರಮ ಅಥವಾ ಯಾವುದೇ ಕಾರ್ಯವನ್ನು (ತೆರಿಗೆ ವಿಧಿಸುವಿಕೆ, ನಿರ್ಧರಣೆ ಮತ್ತು ವಸೂಲಾತಿಗಾಗಿ ಅಥವಾ ಅಂಥ ವಿಧಿಸುವಿಕೆ, ನಿರ್ಧರಣೆ ಮತ್ತು ವಸೂಲಿಯ ಸಂಬಂಧದಲ್ಲಿ ತೆರಿಗೆಯ ರೂಪದಲ್ಲಿ ಸಂಗ್ರಹಿಸಲಾಗಿದೆ ಎಂದು ತಾತ್ಪರ್ಯವಾಗುವ ಮೊಬಲಗಿನ ವಿಧಿಸುವಿಕೆ, ನಿರ್ಧರಣೆ ಮತ್ತು ಸಂಗ್ರಹಣೆಗಾಗಿ ಹೊರಡಿಸಿದ ಯಾವುದೇ ನೋಟಿಸುಗಳು ಅಥವಾ ಆದೇಶಗಳು ಮತ್ತು ನಡೆಸಿದ ಎಲ್ಲ ವ್ಯವಹರಣೆಗಳು ಸೇರಿದಂತೆ) ತನ್ನ ಸದಸ್ಯರಿಗೆ ನಗದಿಗಾಗಿ, ಮುಂದಕ್ಕೆ ಹಾಕಲಾದ ಸಂದಾಯಗಳಿಗಾಗಿ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಸರಕುಗಳನ್ನು ಸರಬರಾಜು ಮಾಡುವ ನಿಗಮಿತವಲ್ಲದ ಸಂಘ ಅಥವಾ ವ್ಯಕ್ತಿಗಳ ನಿಕಾಯದ ಸಂಬಂಧದಲ್ಲಿ, ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಸದರಿ ಅಧಿನಿಯಮದ ಅಡಿಯಲ್ಲಿ ಮಾಡಿದ, ಕೈಗೊಂಡ ಅಥವಾ ನಡೆಸಿದ ವಿಧಿಸುವಿಕೆ, ನಿರ್ಧರಣೆ ಅಥವಾ ವಸೂಲಾತಿ ಅಥವಾ ಕ್ರಮ ಅಥವಾ ಕಾರ್ಯವಾಗಿದ್ದರೆ ಹೇಗೋ ಹಾಗೆ ಎಂಬಂತೆ ಸಿಂಧುವಾಗಿವೆ ಮತ್ತು ಪರಿಣಾಮಕಾರಿಯಾಗಿವೆ ಎಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ,–

(ಎ) ಅಂಥ ತೆರಿಗೆಯ ವಿಧಿಸುವಿಕೆ, ನಿರ್ಧರಣೆ ಅಥವಾ ವಸೂಲಿಯ ಸಂಬಂಧದಲ್ಲಿ ಎಲ್ಲ ಉದ್ದೇಶಗಳಿಗಾಗಿ ಯಾವುದೇ ಪ್ರಾಧಿಕಾರವು ಕೈಗೊಂಡ ಅಥವಾ ನಡೆಸಿದ ಎಲ್ಲ ಕ್ರಮಗಳು, ವ್ಯವಹರಣೆಗಳು ಅಥವಾ ಕಾರ್ಯಗಳನ್ನು, ಕಾನೂನಿನ ಪ್ರಕಾರ ಕೈಗೊಳ್ಳಲಾಗಿದೆ ಮತ್ತು

ನಡೆಸಲಾಗಿದೆ ಎಂದು ಮತ್ತು ಯಾವಾಗಲೂ ಹಾಗೆ ಕೈಗೊಳ್ಳಲಾಗಿದೆ ಅಥವಾ ನಡೆಸಲಾಗಿದೆ ಎಂದು ಭಾವಿಸತಕ್ಕದ್ದು.

(ಬಿ) ಅಂಥ ಯಾವುದೇ ತೆರಿಗೆಯ ಮರುಪಾವತಿಗಾಗಿ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧೀಕರಣ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ; ಮತ್ತು

(ಸಿ) ಯಾವುದೇ ಅಂಥ ತೆರಿಗೆಯ ಮರುಪಾವತಿಗೆ ನಿರ್ದೇಶಿಸಿ ಯಾವ ನ್ಯಾಯಾಲಯವೂ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಜಾರಿ ಮಾಡತಕ್ಕದ್ದಲ್ಲ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೊಳಿಸಲು ಮತ್ತು ಅವುಗಳಿಗೆ ಸಂಬಂಧಿಸಿದ ಮತ್ತು ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳ, ಕಸಬುಗಳ, ಅಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 ಮತ್ತು ಕರ್ನಾಟಕ ವಿಲಾಸಗಳ ಮೇಲೆ ತೆರಿಗೆ ಅಧಿನಿಯಮ, 1979 ಇವುಗಳನ್ನು ತಿದ್ದುಪಡಿ ಮಾಡುವುದು ಹಾಗೂ ನಿರ್ದಿಷ್ಟವಾಗಿ ಈ ಮುಂದಿನವುಗಳಿಗೆ ಎಂದರೆ:–

(i) ಸೆಂಚುರಿ ಕ್ಲಬ್ ಮತ್ತು ಇತರರು–ವಿರುದ್ಧ–ಮೈಸೂರು ರಾಜ್ಯ ಮತ್ತು ಇತರರು ಪ್ರಕರಣದಲ್ಲಿ ಭಾರತ ಸಂವಿಧಾನದ ನಲವತ್ತಾರನೇ ತಿದ್ದುಪಡಿಗೆ ಮುಂಚೆ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರಲ್ಲಿ ಮಾಡಲಾದ ಉಪಬಂಧಗಳು ಅಸಿಂಧು ಹಾಗೂ ಪ್ರವರ್ತನೀಯ ವಲ್ಲವೆಂದು ಘೋಷಿಸಿ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನಿಂದಾಗಿ ಉಂಟಾದ ಸಂದೇಹಗಳನ್ನು ನಿವಾರಿಸುವುದಕ್ಕಾಗಿ ಭಾರತ ಸಂವಿಧಾನದ ನಲವತ್ತಾರನೇ ತಿದ್ದುಪಡಿಯ ಮೂಲಕ ಅಂಥ ವ್ಯವಹಾರಗಳ ಮೇಲೆ ತೆರಿಗೆಯನ್ನು ವಿಧಿಸುವುದಕ್ಕೆ ಉಪಬಂಧ ಕಲ್ಪಿಸಲು ರಾಜ್ಯ

ವಿಧಾನ ಮಂಡಲಕ್ಕೆ ಅಧಿಕಾರ ನೀಡಲಾದ ದಿನಾಂಕವಾದ 1983ರ ಫೆಬ್ರವರಿ ಎರಡನೇ ದಿನಾಂಕದಿಂದ ಪೂರ್ವಾನ್ವಯವಾಗಿ, ನೋಂದಣಿಯಾದ ಅಥವಾ ನೋಂದಣಿಯಾಗಿಲ್ಲದ, ಕ್ಲಬ್‌ಗಳಂಥ ಸಂಘ ಅಥವಾ ವ್ಯಕ್ತಿಗಳ ನಿಕಾಯವು ಸರಬರಾಜು ಮಾಡಿದ ಸರಕುಗಳ ಮೇಲೆ ತೆರಿಗೆಯನ್ನು ವಿಧಿಸುವುದಕ್ಕೆ ಉಪಬಂಧ ಕಲ್ಪಿಸುವುದು,

(ii) ಸಕ್ಕರೆ ಕಾರ್ಖಾನೆಗಳು ಇರುವ ಸ್ಥಳದಲ್ಲಿ ಸಕ್ಕರೆಯನ್ನು ವ್ಯಾಪಾರಿಗಳಿಗೆ ಮಾರಾಟ ಮಾಡಿದಾಗ, ಆ ತರುವಾಯ ಅವರು ರಾಜ್ಯದಲ್ಲಿ ಯಾವುದೇ ಸ್ಥಳೀಯ ಪ್ರದೇಶದೊಳಗೆ ಅಂಥ ಸಕ್ಕರೆಯು ಪ್ರವೇಶಿಸುವಂತೆ ಮಾಡಿದಾಗ ಕರ್ನಾಟಕ ಸರಕುಗಳ ಪ್ರವೇಶದ ಮೇಲೆ ತೆರಿಗೆ ಅಧಿನಿಯಮ, 1979ರಡಿಯಲ್ಲಿ ಮುಂಗಡವಾಗಿ ಪ್ರವೇಶ ತೆರಿಗೆಯನ್ನು ಸಂಗ್ರಹಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು,

– ಅವಶ್ಯಕವೆಂದು ಪರಿಗಣಿಸಲಾಗಿದೆ ಮತ್ತು ಕೆಲವು ಪ್ರಾಸಂಗಿಕವಾದ ಮತ್ತು ಅನುಷಂಗಿಕವಾದ ತಿದ್ದುಪಡಿಗಳನ್ನು ಕೂಡ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನೆಗೆ ಸಂಬಂಧಿಸಿದ ಜ್ಞಾಪನ ಪತ್ರ

ಖಂಡ 2(2)– ವಿಧೇಯಕದ 2(2)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ 12ನೇ ಪ್ರಕರಣದ (1) ಮತ್ತು (1–ಎ) ಉಪಪ್ರಕರಣಗಳ ಪರಂತುಕಗಳು, ವಿದ್ಯುನ್ಮಾನ ವಿಧಾನದಲ್ಲಿ ವಿವರಪಟ್ಟಿಯನ್ನು ದಾಖಲು ಮಾಡಬೇಕಾಗಿರುವ ಮತ್ತು ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಸಂದಾಯ ಮಾಡಬೇಕಾಗಿರುವ ನೋಂದಾಯಿತ ವ್ಯಾಪಾರಿಗಳ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ2(3)– ವಿಧೇಯಕದ 2(3)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ 12–ಬಿ ಪ್ರಕರಣದ (1)ನೇ ಉಪಪ್ರಕರಣದ ಪರಂತುಕವು, ವಿದ್ಯುನ್ಮಾನ ವಿಧಾನದಲ್ಲಿ ವಿವರಪತ್ರವನ್ನು ದಾಖಲು ಮಾಡಬೇಕಾಗಿರುವ ಮತ್ತು ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಸಂದಾಯ ಮಾಡಬೇಕಾಗಿರುವ ನೋಂದಾಯಿತ ವ್ಯಾಪಾರಿಗಳ ವರ್ಗವನ್ನು ಅಧಿಸೂಚಿಯ ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 2(4)– ವಿಧೇಯಕದ 2(4)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ 13ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕವು, ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಮತ್ತು ಬಾಕಿ ಇರುವ ಇತರ ಮೊತ್ತವನ್ನು ಸಂದಾಯ ಮಾಡಬೇಕಾಗಿರುವ ನೋಂದಾಯಿತ

ವ್ಯಾಪಾರಿಗಳ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 2(5)– ವಿಧೇಯಕದ 2(5)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ 12–ಬಿ ಪ್ರಕರಣದ (3) ಮತ್ತು (4)ನೇ ಉಪಪ್ರಕರಣಗಳ ಪರಂತ ಕುಗಳು, ವಿದ್ಯುನ್ಮಾನ ವಿಧಾನದಲ್ಲಿ ವಿವರಪಟ್ಟಿಯಲ್ಲಿ ದಾಖಲು ಮಾಡಬೇಕಾಗಿರುವ ಮತ್ತು ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಸಂದಾಯ ಮಾಡಬೇಕಾಗಿರುವ ನೋಂದಾಯಿತ ವ್ಯಾಪಾರಿಗಳ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 3(1)– ವಿಧೇಯಕದ 3(1)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ, 1958ರ 6–ಎ ಪ್ರಕರಣದ (1) ಮತ್ತು (1–ಎ) ಉಪಪ್ರಕರಣಗಳ ಪರಂತುಕಗಳು, ವಿದ್ಯುನ್ಮಾನ ವಿಧಾನದಲ್ಲಿ ವಿವರಪಟ್ಟಿಯನ್ನು ದಾಖಲು ಮಾಡಬೇಕಾಗಿರುವ ಮತ್ತು ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಸಂದಾಯ ಮಾಡಬೇಕಾಗಿರುವ ಮನರಂಜನಾ ಸಂಸ್ಥೆಗಳ ಮಾಲೀಕರ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 3(2)– ವಿಧೇಯಕದ 3(2)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ, 1958ರ 9ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕವು, ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಮತ್ತು ಬಾಕಿ ಇರುವ ಇತರ ಮೊತ್ತವನ್ನು ಸಂದಾಯ ಮಾಡಬೇಕಾಗಿರುವ ಮನರಂಜನಾ ಸಂಸ್ಥೆಗಳ ಮಾಲೀಕರ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 4(1)– ವಿಧೇಯಕದ 4(1)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರ 6ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳ ಪರಂತುಕಗಳು, ವಿದ್ಯುನ್ಮಾನ ವಿಧಾನದಲ್ಲಿ ವಿವರ ಪಟ್ಟಿಯನ್ನು ದಾಖಲು ಮಾಡಬೇಕಾಗಿರುವ ಮತ್ತು ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಸಂದಾಯ ಮಾಡಬೇಕಾಗಿರುವ ನಿಯೋಜಕರ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 4(2)– ವಿಧೇಯಕದ 4(2)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರ 6–ಎ ಪ್ರಕರಣದ (1) ಮತ್ತು (2) ನೇ ಉಪಪ್ರಕರಣಗಳ ಪರಂತುಕಗಳು, ವಿದ್ಯುನ್ಮಾನ ವಿಧಾನದಲ್ಲಿ ವಿವರಪಟ್ಟಿಯನ್ನು ದಾಖಲು ಮಾಡಬೇಕಾಗಿರುವ ಮತ್ತು ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಸಂದಾಯ ಮಾಡಬೇಕಾಗಿರುವ ನಿಯೋಜಕರ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 4(3)– ವಿಧೇಯಕದ 4(3)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರ 10ನೇ ಪ್ರಕರಣದ (1) ಮತ್ತು (5)ನೇ ಉಪಪ್ರಕರಣಗಳ ಪರಂತುಕಗಳು, ವಿದ್ಯುನ್ಮಾನ ವಿಧಾನದಲ್ಲಿ ವಿವರಪತ್ರವನ್ನು ದಾಖಲು ಮಾಡಬೇಕಾಗಿರುವ ಮತ್ತು ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಸಂದಾಯ ಮಾಡಬೇಕಾಗಿರುವ ಪಟ್ಟಿಯಲ್ಲಿ ಸೇರಿರುವ ವ್ಯಕ್ತಿಗಳ ಮತ್ತು ಇತರ ವ್ಯಕ್ತಿಗಳ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 5(2)– ವಿಧೇಯಕದ 5(2)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ವಿಲಾಸಗಳ ಮೇಲೆ ತೆರಿಗೆ ಅಧಿನಿಯಮ, 1979ರ 5ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳ ಪರಂತುಕಗಳು,, ವಿದ್ಯುನ್ಮಾನ ವಿಧಾನದಲ್ಲಿ ವಿವರಪಟ್ಟಿಯನ್ನು ದಾಖಲು ಮಾಡಬೇಕಾಗಿರುವ ಮತ್ತು ವಿದ್ಯುನ್ಮಾಣ ವಿಧಾನದಲ್ಲಿ ತೆರಿಗೆಯನ್ನು ಸಂದಾಯ ಮಾಡಬೇಕಾಗಿರುವ ಮಾಲೀಕರ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 5(3)– ವಿಧೇಯಕದ 5(3)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ವಿಲಾಸಗಳ ಮೇಲೆ ತೆರಿಗೆ ಅಧಿನಿಯಮ, 1979ರ 5–ಎ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳ ಪರಂತುಕಗಳು, ವಿದ್ಯುನ್ಮಾನ ವಿಧಾನದಲ್ಲಿ ವಿವರ ಪತ್ರವನ್ನು ದಾಖಲು ಮಾಡಬೇಕಾಗಿರುವ ಮತ್ತು ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಸಂದಾಯ ಮಾಡಬೇಕಾಗಿರುವ ಮಾಲೀಕರ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 6(1)– ವಿಧೇಯಕದ 6(1)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ರ 5ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳ, ಪರಂತುಕಗಳು, ವಿದ್ಯುನ್ಮಾನ ವಿಧಾನದಲ್ಲಿ ವಿವರಪಟ್ಟಿಯನ್ನು ದಾಖಲು ಮಾಡಬೇಕಾಗಿರುವ ಮತ್ತು ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಸಂದಾಯ ಮಾಡ ಬೇಕಾಗಿರುವ ವ್ಯಾಪಾರಿಗಳ ವರ್ಗವನ್ನು ಅಧಿಸೂಚಿಯ ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 6(2)– ವಿಧೇಯಕದ 6(2)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ರ 7ನೇ ಪ್ರಕರಣದ (1)ನೇ

ಉಪಪ್ರಕರಣದ ಪರಂತುಕವು, ವಿದ್ಯುನ್ಮಾನ ವಿಧಾನದಲ್ಲಿ ವಿವರಪಟ್ಟಿಯಲ್ಲಿ ದಾಖಲು ಮಾಡಬೇಕಾಗಿರುವ ಮತ್ತು ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಸಂದಾಯ ಮಾಡ ಬೇಕಾಗಿರುವ ವ್ಯಾಪಾರಿಗಳ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 6(3)– ವಿಧೇಯಕದ 6(3)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ರ 8ನೇ ಪ್ರಕರಣದ (1)ನೇ ಉಪ ಪ್ರಕರಣದ ಪರಂತುಕವು, ವಿದ್ಯುನ್ಮಾನ ವಿಧಾನದಲ್ಲಿ ತೆರಿಗೆಯನ್ನು ಮತ್ತು ಬಾಕಿ ಇರುವ ಇತರ ಮೊತ್ತವನ್ನು ಸಂದಾಯ ಮಾಡಬೇಕಾಗಿರುವ ವ್ಯಾಪಾರಿಗಳ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಖಂಡ 6(4)– ವಿಧೇಯಕದ 6(4)ನೇ ಖಂಡದ ಅಡಿಯಲ್ಲಿ ಸೇರಿಸಲಾಗುವ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ರ ಹೊಸ 8–ಬಿ ಪ್ರಕರಣದ (3) ಮತ್ತು (4)ನೇ ಉಪಪ್ರಕರಣಗಳು, ಸಕ್ಕರೆಯ ಉತ್ಪಾದಕನಿಗೆ ಸಂದಾಯ ಮಾಡಿದ ತೆರಿಗೆಯ ವಿವರಗಳನ್ನು ಯಾವ ವಿವರ ಪತ್ರದ ನಮೂನೆಯಲ್ಲಿ ಸಕ್ಕರೆಯ ಉತ್ಪಾದಕನು ಘೋಷಿಸಬೇಕಾಗಿದೆಯೋ ಆ ವಿವರಪತ್ರದ ನಮೂನೆಯನ್ನು, ಅದರಲ್ಲಿ ಯಾವ ಪ್ರಾಧಿಕಾರಿಗೆ ಸಲ್ಲಿಸಬೇಕೋ ಆ ಪ್ರಾಧಿಕಾರಿ ಯನ್ನು, ಖರೀದಿಸುವ ವ್ಯಾಪಾರಿಯು ಅವನಿಗೆ ತೆರಿಗೆಯನ್ನು ಸಂದಾಯ ಮಾಡಿದ ಬಗ್ಗೆ ಅಂಥ ಉತ್ಪಾದಕನು ನೀಡಬೇಕಾದ ಪ್ರಮಾಣ ಪತ್ರದ ನಮೂನೆಯನ್ನು ಗೊತ್ತು ಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. ಹೊಸ 8–ಬಿ ಪ್ರಕರಣದ (3)ನೇ ಉಪಪ್ರಕರಣದ ಪರಂತುಕವು, ವಿದ್ಯುನ್ಮಾನ ವಿಧಾನದಲ್ಲಿ ವಿವರಪಟ್ಟಿಯನ್ನು ದಾಖಲು ಮಾಡಬೇಕಾಗಿರುವ ಮತ್ತು ವಿದ್ಯುನ್ಮಾನ ವಿಧಾನದಲ್ಲಿ

ತೆರಿಗೆಯನ್ನು ಸಂದಾಯ ಮಾಡಬೇಕಾಗಿರುವ ಉತ್ಪಾದಕರ ವರ್ಗವನ್ನು ಅಧಿಸೂಚಿಸಲು ಸಹ ವಾಣಿಜ್ಯ ತೆರಿಗೆ ಆಯುಕ್ತರಿಗೆ ಅಧಿಕಾರ ನೀಡುತ್ತದೆ.

ಪ್ರಸ್ತಾವಿತ ಶಾಸನಾತ್ಮಕ ಅಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು ಮತ್ತು
ಆರ್ಥಿಕ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2010ರ (1957ರ ಕರ್ನಾಟಕ ಅಧಿನಿಯಮ 25)

ಉದ್ಧೃತ ಭಾಗ

xx xx xx

2. ಪರಿಭಾಷೆಗಳು.– (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) ವ್ಯಾಕರಣ ವ್ಯತ್ಯಾಸಗಳೊಡನೆ "ಕೃಷಿ" ಎಂಬುದು ತೋಟಗಾರಿಕೆ, ಬೆಳೆಗಳು, ಹುಲ್ಲು ಅಥವಾ ತೋಟದ ಉತ್ಪನ್ನಗಳನ್ನು ಬೆಳೆಸುವುದು ಮತ್ತು ಜಾನುವಾರು ಮೇಯಿಸುವುದನ್ನು ಒಳಗೊಳ್ಳುತ್ತದೆ. ಆದರೆ ಇದು ಹಾಲು ಉತ್ಪಾದನೆ, ವ್ಯವಸಾಯ, ಕೋಳಿ ಸಾಕಣೆ ಜಾನುವಾರು ತಳಿವರ್ಧನೆ ಮತ್ತು ಕೇವಲ ಮರವನ್ನು ಕಡಿಯುವುದನ್ನು ಒಳಗೊಳ್ಳುವುದಿಲ್ಲ.

xx xx xx

(ಕೆ) "ವ್ಯವಹಾರಿ" ಎಂದರೆ, ನಗದಿಗಾಗಿಯೇ ಆಗಲಿ ಅಥವಾ ಮುಂದಕ್ಕೆ ಹಾಕಲಾದ ಸಂದಾಯಕ್ಕೆ ಆಗಲಿ ಅಥವಾ ರುಸುಮು, ಪರಿಶ್ರಮಧನ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಆಗಲಿ ನೇರವಾಗಿ ಅಥವಾ ಅನ್ಯಥಾ ಸರಕುಗಳನ್ನು ಖರೀದಿಸುವ ಮಾರಾಟ ಮಾಡುವ, ಸರಬರಾಜು ಮಾಡುವ, ಅಥವಾ ವಿತರಣೆ ಮಾಡುವ ವ್ಯವಹಾರವನ್ನು ನಡೆಸುತ್ತಿರುವ ಯಾವನೇ ವ್ಯಕ್ತಿ ಮತ್ತು ಅದು

(i) ಕರ್ನಾಟಕ ಸರ್ಕಾರ, ಕೇಂದ್ರ ಸರ್ಕಾರ, ಕರ್ನಾಟಕ ರಾಜ್ಯವನ್ನು ಹೊರತುಪಡಿಸಿ ಇತರ ಯಾವುದೇ ರಾಜ್ಯದ ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರ, ಕಂಪನಿ, ಹಿಂದೂ ಅವಿಭಕ್ತ ಕುಟುಂಬ, ಆಳಿಯ ಸಂತಾನ ಕುಟುಂಬ, ಫರ್ಮ ಸೊಸೈಟಿ ಕ್ಲಬ್ ಅಥವಾ ಅಂಥ ವ್ಯವಹಾರವನ್ನು ನಡೆಸುತ್ತಿರುವ ಸಂಘದ ಯಾವುದೇ ಔದ್ಯಮಿಕ, ವಾಣಿಜ್ಯ ಅಥವಾ ವ್ಯಾಪಾರಿ ಉದ್ಯಮ;

(ii) xx xx xx
(iii) xx xx xx
(iv) xx xx xx
(v) xx xx xx

(vi) ಅಂತಹ ವ್ಯವಹಾರವನ್ನು ನಡೆಸುತ್ತಿರುವ ಗಿರಣಿದಾರ;

xx xx xx

(ಟಿ) ಅದರ ಎಲ್ಲಾ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತಿಯ ಪದಾವಳಿಗಳೊಂದಿಗೆ "ಮಾರಾಟ" ಎಂದರೆ, ನಗದಿಗಾಗಿ ಅಥವಾ ಮುಂದಕ್ಕೆ ಹಾಕಲಾದ ಸಂದಾಯಕ್ಕಾಗಿ ಅಥವಾ ಬೆಲೆಯುಳ್ಳ ಪ್ರತಿಫಲಕ್ಕಾಗಿ ವ್ಯಾಪಾರ ಅಥವಾ ವ್ಯವಹಾರ ಕ್ರಮದಲ್ಲಿ ಒಬ್ಬ ವ್ಯಕ್ತಿಯು ಇನ್ನೊಬ್ಬನಿಗೆ ಮಾಡುವ ಸರಕುಗಳಲ್ಲಿ ಸ್ವಾಮ್ಯ (ಅಡಮಾನ, ಆಧಾರ ಅಥವಾ ಒತ್ತೆಯಲ್ಲದ ಅನ್ಯಥಾ)ದ ಪ್ರತಿಯೊಂದು ವರ್ಗಾವಣೆ ಮತ್ತು

(i) ನಗದು, ಮುಂದಕ್ಕೆ ಹಾಕಿದ ಸಂದಾಯ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಯಾವುದೇ ಸರಕುಗಳಲ್ಲಿ ಸ್ವತ್ತಿನ ಕರಾರಿನ ಅನುಸರಣೆಯಲ್ಲಿ ಅಲ್ಲದ ಅನ್ಯಥಾ ವರ್ಗಾವಣೆ;

(ii) xx xx xx

(iii) xx xx xx

(iv) ನಗದು ಮುಂದಕ್ಕೆ ಹಾಕಿದ ಸಂದಾಯ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಯಾವುದೇ ಉದ್ದೇಶಕ್ಕಾಗಿ (ನಿರ್ದಿಷ್ಟ ಅವಧಿಗಾಗಲಿ ಅಥವಾ ಇಲ್ಲದಿರಲಿ) ಯಾವುದೇ ಸರಕುಗಳ ಉಪಯೋಗದ ಹಕ್ಕಿನ ವರ್ಗಾವಣೆ;

—ಇವುಗಳನ್ನು ಒಳಗೊಳ್ಳುತ್ತದೆ.

ವಿವರಣೆ–1 ಸೊಸೈಟಿಯ (ಸಹಕಾರಿ ಸಂಘ ಸೇರಿದಂತೆ) ಕ್ಲಬ್, ಫರ್ಮ್ ಅಥವಾ ಯಾವುದೇ ಸಂಘವು ಅದರ ಸದಸ್ಯರುಗಳಿಗೆ ವ್ಯವಹಾರದ ಕ್ರಮದಲ್ಲಿಯೇ ಆಗಲಿ ಅಥವಾ ಅವಿಲ್ಲದೇ ನಗದಿಗಾಗಿ ಅಥವಾ ಮುಂದಕ್ಕೆ ಹಾಕಿದ ಸಂದಾಯಕ್ಕಾಗಿ ಅಥವಾ ಇತರ ಬೆಲೆ ಬಾಳುವ ಪ್ರತಿಫಲಕ್ಕಾಗಿ ಮಾಡುವ ಸರಕುಗಳ ಸರಬರಾಜು ಅಥವಾ ವಿತರಣೆಯಲ್ಲಿ ಒಳಗೊಂಡಿರುವ ಸ್ವತ್ತಿನ ವರ್ಗಾವಣೆಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಮಾರಾಟವಾಗಿರುವುದಾಗಿ ಭಾವಿಸತಕ್ಕದ್ದು.

xx xx xx

ವಿವರಣೆ 3ಎ.– ಆಹಾರವಾಗಿರುವ ಅಥವಾ ಮಾನವ ಬಳಕೆಗಾಗಿನ ಯಾವುದೇ ಇತರ ವಸ್ತು ಅಥವಾ ಯಾವುದೇ ಪೇಯ (ಅದು ಮಾದಕದ್ರವ್ಯಗಿರಲಿ ಅಥವಾ ಅಲ್ಲದಿರಲಿ) ಸರಕುಗಳನ್ನು ಯಾವುದೇ ಸೇವೆಯ ರೂಪ ಅಥವಾ ಒಂದು ಭಾಗದ ಮೂಲಕ ಅಥವಾ ಸರಬರಾಜಿನ ಪ್ರತಿಯೊಂದು ವ್ಯವಹಾರವು, ಅಂತಹ ಸರಬರಾಜು ಅಥವಾ ಸೇವೆಯು ನಗದಿಗಾಗಿ ಅಥವಾ ಮುಂದಕ್ಕೆ ಹಾಕಿದ ಸಂದಾಯ ಅಥವಾ ಇತರ ಬೆಲೆಬಾಳುವ ಪ್ರತಿಫಲಕ್ಕಾಗಿ ಇರುವಲ್ಲಿ ಆ ಸರಕುಗಳನ್ನು ಸರಬರಾಜು ಮತ್ತು

ಖರೀದಿ ಮಾಡುವ ವ್ಯಕ್ತಿಯಿಂದ ಅಂಥ ಸರಬರಾಜನ್ನು ಯಾರಿಗೆ ಮಾಡಲಾಗಿದೆಯೋ ಆ ವ್ಯಕ್ತಿಗೆ ಮಾಡಿದ ಮಾರಾಟವೆಂದು ಭಾವಿಸತಕ್ಕದ್ದು.

xx xx xx

12. ವಿವರ ಪಟ್ಟಿಗಳು ಮತ್ತು ನಿರ್ಧರಣೆ.– (1) 12–ಬಿ ಪ್ರಕರಣದಲ್ಲಿ ಏನೇ ಇದ್ದರೂ, ಪ್ರತಿಯೊಬ್ಬ ನೋಂದಾಯಿತ ವ್ಯವಹಾರಿಯು ಮತ್ತು 10ನೇ ಪ್ರಕರಣದ (1) ಮತ್ತು (2)ನೆ ಉಪ ಪ್ರಕರಣದ ಮೇರೆಗೆ ನೋಂದಣಿಗೆ ಒಳಪಡತಕ್ಕ ಪ್ರತಿಯೊಬ್ಬ ವ್ಯವಹಾರಿಯು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ ತನ್ನ ಮಾರಾಟ ಹಣದ ಸಂಬಂಧದಲ್ಲಿ ವಿವರಪಟ್ಟಿಕೆ ಅಥವಾ ವಿವರ ಪಟ್ಟಿಕೆಗಳನ್ನು ಸಲ್ಲಿಸತಕ್ಕದ್ದು.

(1ಎ) (1) ಉಪ ಪ್ರಕರಣದ ಮೇರೆಗೆ ಯಾವುದೇ ವಿವರಪಟ್ಟಿಕೆಯನ್ನು ಯಾವನೇ ವ್ಯವಹಾರಿಯು ಒಪ್ಪಿಸುವುದಕ್ಕೆ ಮುಂಚೆ ಅವನು ನಿಯಮಿಸಿದ ರೀತಿಯಲ್ಲಿ ಮುಂಗಡವಾಗಿ 13–ಬಿ ಪ್ರಕರಣದ ಮೇರೆಗೆ ಈಗಾಗಲೇ ಸಂದಾಯ ಮಾಡಿದ ಯಾವುದೇ ತೆರಿಗೆಯನ್ನು ಕಡಿಮೆ ಮಾಡಿದಂತೆ ಅಂಥ ವಿವರಪಟ್ಟಿಕೆಯ ಆಧಾರದ ಮೇಲೆ ಅವನು ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣ ಮೊಬಲಗನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ತೆರಿಗೆಯ ಸಂದಾಯದ ತೃಪ್ತಿಕರ ರುಜುವಾತನ್ನು ವಿವರಪಟ್ಟಿಕೆಯೊಂದಿಗೆ ಒದಗಿಸತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಬೇಕಾದ ತೆರಿಗೆಯನ್ನು, 13ನೇ ಪ್ರಕರಣದ ಉದ್ದೇಶಗಳಿಗಾಗಿ ಅಂಥ ವ್ಯವಹಾರಿಯಿಂದ ಈ ಅಧಿನಿಯಮದ ಮೇರೆಗೆ ಬಾಕಿಯಾಗುವ ತೆರಿಗೆ ಎಂಬುದಾಗಿ ಭಾವಿಸತಕ್ಕದ್ದು. ಅಂತಿಮ ನಿರ್ಧರಣೆಯನ್ನು ಮಾಡಿದ ತರುವಾಯ ಹಾಗೆ ಸಂದಾಯ ಮಾಡಿದ ತೆರಿಗೆಯ ಮೊಬಲಗನ್ನು ನಿರ್ಧರಿಸಿದ ತೆರಿಗೆಯ ಬಗ್ಗೆ ಸಂದಾಯ ಮಾಡಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು.

xx xx xx

12ಬಿ. ಮುಂಗಡವಾಗಿ ತೆರಿಗೆಯ ಸಂದಾಯ.– (1) ನಿಯಮಿಸಬಹುದಾದಂತಹ ನಿಯಮಗಳಿಗೆ ಒಳಪಟ್ಟು, ಪ್ರತಿಯೊಬ್ಬ ವ್ಯವಹಾರಿಯು, ಹಿಂದಿನ ತಿಂಗಳಲ್ಲಿನ ತೆರಿಗೆಗೆ ಗುರಿಯಾಗಬಹುದಾದ ಮಾರಾಟದ ಹಣವನ್ನು ಒಳಗೊಂಡು ನಿಯಮಿಸಬಹುದಾದಂಥ ವಿವರಗಳನ್ನು

ಒಳಗೊಂಡಿರುವ ವಿವರಪತ್ರವನ್ನು ಪ್ರತಿ ತಿಂಗಳು ಕಳುಹಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಅಂಥ ತೆರಿಗೆಯು ಸಂಬಂಧಪಡುವಂತಹ ಹಿಂದಿನ ತಿಂಗಳ ಮುಕ್ತಾಯದ ತರುವಾಯ ಇಪ್ಪತ್ತು ದಿವಸ ವಿವರ ಪತ್ರದಲ್ಲಿ ತೋರಿಸಿದ ಮಾರಾಟದ ಹಣದ ವಿವರಗಳ ಆಧಾರದ ಮೇಲೆ ಅವನು ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣ ಮೊಬಲಗನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಬೇಕಾದ ಮೊಬಲಗನ್ನು 13ನೇ ಪ್ರಕರಣದ ಉದ್ದೇಶಗಳಿಗಾಗಿ ಅಂತಹ ವ್ಯವಹಾರಿಯಿಂದ ಈ ಅಧಿನಿಯಮದ ಮೇರೆಗೆ ಬಾಕಿಯಾಗುವ ಮೊಬಲಗು ಎಂಬುದಾಗಿ ಭಾವಿಸತಕ್ಕದ್ದು.

ಪರಂತು,–

(i) 17ನೇ ಪ್ರಕರಣದ (1)ನೇ ಉಪ–ಪ್ರಕರಣದ ರಾಜು ಮೂಲಕದ ಸಂದಾಯಕ್ಕೆ ಒಪ್ಪಿಕೊಂಡ ವ್ಯವಹಾರಿಯ ಸಂದರ್ಭದಲ್ಲಿ (1)ನೆ ಉಪ–ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ; ಮತ್ತು

(ii) ಕರ್ನಾಟಕ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶಕರಲ್ಲಿ ನೋಂದಾಯಿಸಿರುವ ಸಣ್ಣ ಪ್ರಮಾಣದ ಕೈಗಾರಿಕೆಯಾಗಿರುವ ವ್ಯಾಪಾರಿಯ ಸಂದರ್ಭದಲ್ಲಿ, ಅಂಥ ವ್ಯಾಪಾರಿಯು (1)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಅಂಥ ವಿವರಪತ್ರವನ್ನು ಕಳುಹಿಸತಕ್ಕದ್ದು ಆದರೆ ಪ್ರತಿಯೊಂದು ತ್ರೈಮಾಸಿಕಕ್ಕಾಗಿ ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣ ಮೊಬಲಗನ್ನು ಮುಂಗಡವಾಗಿ ಆ ತ್ರೈಮಾಸಿಕವು ಮುಕ್ತಾಯವಾದ ತರುವಾಯ ಇಪ್ಪತ್ತು ದಿನಗಳೊಳಗಾಗಿ ಸಂದಾಯ ಮಾಡತಕ್ಕದ್ದು;

(iii) ಯಾವ ವ್ಯಾಪಾರಿಯು ಯಾವುದೇ ವರ್ಷದಲ್ಲಿನ ಒಟ್ಟು ವಹಿವಾಟು ಏಳು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ಮೀರಿಲ್ಲವೋ ಆ ವ್ಯಾಪಾರಿಯು ಸಂದರ್ಭದಲ್ಲಿ, (1)ನೇ ಉಪಪ್ರಕರಣದಲ್ಲಿ ಒಮ್ಮೆ ಸಲ್ಲಿಸತಕ್ಕದ್ದು. ಮತ್ತು ಪ್ರತಿ ತ್ರೈಮಾಸಿಕವಾಗಿ ಸಂದಾಯ ಮಾಡಬೇಕಾದ ತೆರಿಗೆಯ

ಪೂರ್ಣ ಮೊಬಲಗನ್ನು, ಮುಂಗಡವಾಗಿ, ಅಂಥ ತೆರಿಗೆಯ ಸಂಬಂಧಪಡುವ ಆ ತ್ರೈಮಾಸಿಕವು ಮುಕ್ತಾಯವಾದ ತರುವಾಯ ಇಪ್ಪತ್ತು ದಿನಗಳೊಳಗಾಗಿ ಸಂದಾಯ ಮಾಡತಕ್ಕದ್ದು.

ಮತ್ತೂ ಪರಂತು, ವ್ಯಾಪಾರಿಯು ವರ್ಷಕ್ಕಾಗಿ ಮುಂಗಡವಾಗಿ ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣ ಮೊಬಲಗನ್ನು, ಈ ಪ್ರಕರಣದ ಮೇರೆಗೆ ಈಗಾಗಲೇ ಸಂದಾಯ ಮಾಡಿದ ತೆರಿಗೆಯ ಮೊಬಲಗಿನಷ್ಟು ಕಡಿಮೆ ಮಾಡಿ, ಅಂಥ ತೆರಿಗೆಯ ಸಂಬಂಧ ಪಡುವ ವರ್ಷವು ಮುಕ್ತಾಯವಾದ ತರುವಾಯ ಮೂವತ್ತು ದಿನಗಳೊಳಗಾಗಿ ಸಂದಾಯ ಮಾಡತಕ್ಕದ್ದು:

ಅಲದೆ ಪರಂತು, ಸಣ್ಣ ಕೈಗಾರಿಕೋದ್ಯಮು ಯಾವುದೇ ತ್ರೈಮಾಸಿಕಕ್ಕಾಗಿ ಸಂದಾಯ ಮಾಡಬೇಕಾಗಿರುವ ತೆರಿಗೆಯನ್ನು, ಅಂಥ ತೆರಿಗೆಯ ಸಂಬಂಧಪಡುವ ತ್ರೈಮಾಸಿಕವು ಮುಕ್ತಾಯವಾದ ತರುವಾಯ ಮೂವತ್ತು ದಿನಗಳೊಳಗಾಗಿ ಸಂದಾಯ ಮಾಡಿದಿದ್ದರೆ, ಅಂಥ ಉದ್ಯಮವು, ಮೊದಲನೇ ಪರಂತುಕವನ್ನು ಹೊರತುಪಡಿಸಿ, ಈ ಉಪಪ್ರಕರಣದ ಮೇರೆಗೆ ಉಪಬಂಧಿಸಲಾದಂತೆ ಆ ತರುವಾಯ ತೆರಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕದು.

xx xx xx

13. ತೆರಿಗೆ ಸಂದಾಯ ಮತ್ತು ವಸೂಲಿ.– ಈ ಅಧಿನಿಯಮದ ಮೇರೆಗೆ ಬಾಕಿ ಇರುವ ಯಾವುದೇ ತೆರಿಗೆಯನ್ನು ಅಥವಾ ಯಾವುದೇ ಇತರ ಮೊಬಲಗನ್ನು ನಿಯಮಿಸಬಹುದಾದಂಥ ರೀತಿಯಲ್ಲಿ, ಅಷ್ಟು ಕಂತುಗಳಲ್ಲಿ, ಅಂಥ ಷರತ್ತುಗಳಿಗೆ ಒಳಪಟ್ಟು, ಅಂಥ ಬಡ್ಡಿಯ ಸಂದಾಯದ ಮೇಲೆ ಮತ್ತು ಅಂಥ ಕಾಲದೊಳಗೆ ಸಂದಾಯ ಮಾಡತಕ್ಕದ್ದು.

ಪರಂತು, ಸಂದಾಯ ಮಾಡಿರುವ ಮೊಬಲಗು ತೆರಿಗೆಯ ಅಥವಾ ಬಾಕಿಯಿರುವ ಯಾವುದೇ ಇತರ ಮೊಬಲಗಿನ ಅಥವಾ ಸಂದಾಯ ಮಾಡಬೇಕಾಗಿರುವ ಬಡ್ಡಿಯ ಒಟ್ಟು ಮೊತ್ತಕ್ಕಿಂತ ಕಡಿಮೆ ಇರುವಲ್ಲಿ, ಹಾಗೆ ಸಂದಾಯ ಮಾಡಿರುವ ಮೊಬಲಗನ್ನು ಮೊದಲು, ಸಂದಾಯ ಮಾಡಬೇಕಾದ ಬಡ್ಡಿಯ ಸಂಬಂಧದಲ್ಲಿ ಸರಿಹೊಂದಿಸತಕ್ಕದ್ದು ಮತ್ತು ಹಣ

ಇನ್ನೂ ಉಳಿದಿರುವಲ್ಲಿ ಅದನ್ನು ತೆರಿಗೆ ಅಥವಾ ಬಾಕಿ ಇರುವ ಯಾವುದೇ ಇತರ ಮೊಬಲಗಿಗೆ ಹೊಂದಿಸತಕ್ಕದ್ದು.

xx xx xx

25ಬಿ. ಕಬ್ಬಿನ ಮೇಲೆ ತೆರಿಗೆ ವಿಧಿಸುವುದು.– (1) 5ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯದಲ್ಲಿ 'ಕಬ್ಬಿನ ಕೊನೆಯ ಖರೀದಿಯ ಮೇಲೆ,–

(i) ಖಂಡಸಾರಿ ಸಕ್ಕರೆಯು ಒಳಗೊಂಡಂತೆ ಸಕ್ಕರೆಯ ವಸೂಲಿ ಪ್ರಮಾಣವು ಶೇಕಡಾ 10.5ನ್ನು ಮೀರಿರುವ ಸಕ್ಕರೆ ಉತ್ಪಾದಕರು ಖರೀದಿಸಿದಾಗ ಒಂದು ಟನ್‌ಗೆ 65 ರೂಪಾಯಿಗಳು.

(ii) ಖಂಡಸಾರಿ ಸಕ್ಕರೆಯು ಒಳಗೊಂಡಂತೆ ಸಕ್ಕರೆಯ ವಸೂಲಿ ಪ್ರಮಾಣವು ಶೇಕಡಾ 10.5ನ್ನು ಮೀರದಿರುವ ಸಕ್ಕರೆಯ ಉತ್ಪಾದಕನು ಖರೀದಿಸಿದಾಗ, ಒಂದು ಟನ್‌ಗೆ 50 ರೂಪಾಯಿಗಳು.

– ದರದಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ವಸೂಲಿ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ತೆರಿಗೆಯನ್ನು ಮತ್ತು (2)ನೇ ಉಪಪ್ರಕರಣದ ಮೇರೆಗೆ ಉಪಕರಣವನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ ವಿವರ ಪಟ್ಟಿಯನ್ನು ಅಥವಾ ವಿವರ ಪಟ್ಟಿಕೆಗಳನ್ನು ಸಲ್ಲಿಸತಕ್ಕದ್ದು.

(4) ಪ್ರತಿಯೊಬ್ಬ ಖರೀದಿದಾರನು, ಹಿಂದಿನ ತಿಂಗಳ ಅವಧಿಯಲ್ಲಿ ಖರೀದಿಸಿದ ಸಕ್ಕರೆಯ ಪ್ರಮಾಣದ ಮೇಲೆ (1)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಯನ್ನು ಮತ್ತು (2)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಉಪಕರವನ್ನು ಪ್ರತಿ ತಿಂಗಳು ಮುಂಗಡವಾಗಿ ಸಂದಾಯ ಮಾಡತಕ್ಕದ್ದು.

xx xx xx

ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ ಸಂಖ್ಯೆ: 30)

ಉದ್ಧೃತ ಭಾಗ

xx xx xx

6ಎ. ವಿವರ ಪಟ್ಟಿಕೆಗಳು.– (1) ಮನೋರಂಜನೆಯ ಪ್ರತಿಯೊಬ್ಬ ಮಾಲೀಕನು ಗೌರವಾರ್ಥ ಟಿಕೆಟ್‌ಗಿಗೆ ಮತ್ತು ಪ್ರವೇಶಕ್ಕಾಗಿನ ಸಂದಾಯಗಿಗೆ ಸಂಬಂಧಪಟ್ಟಂಥ ಅಂಥ ವಿವರ ಪಟ್ಟಿಕೆಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಅಂಥ ಪ್ರಾಧಿಕಾರಕ್ಕೆ ಒಪ್ಪಿಸತಕ್ಕದ್ದು;

ಪರಂತು, ಒಂದು ಪ್ರದರ್ಶನ ಅಥವಾ ಒಂದು ವಾರಕ್ಕಿಂತ ಕಡಿಮೆ ಅವಧಿಗೆ ನಡೆಸುವ ಮನೋರಂಜನೆಯ ಸಂಬಂಧದಲ್ಲಿ ಮಾಲೀಕನು, ಅಂಥ ಮನೋರಂಜನೆಯ ಮುಕ್ತಾಯವಾದ ಕೂಡಲೇ ನಿಯಮಿಸಬಹುದಾದಂಥ ವಿವರಪಟ್ಟಿಕೆಯನ್ನು ಸಲ್ಲಿಸತಕ್ಕದ್ದು.

(1ಎ) ಯಾವನೇ ಮಾಲೀಕನು, (1)ನೇ ಉಪ ಪ್ರಕರಣದಿಂದ ಅಗತ್ಯಪಡಿಸಿದ ವಿವರಪಟ್ಟಿಕೆಗಳನ್ನು ಒಪ್ಪಿಸುವುದಕ್ಕೆ ಮುಂಚೆ, ಅವನು ಅಂಥ ವಿವರಪಟ್ಟಿಕೆಗಳ ಆಧಾರದ ಮೇಲೆ ತಾನು ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣ ಮೊಬಲಗು ಮತ್ತು ಹೆಚ್ಚಿನ ತೆರಿಗೆ ಅಥವಾ ಇತರ ತೆರಿಗೆಗಳು ಯಾವುದಾದರೂ ಇದ್ದರೆ ಅವುಗಳನ್ನು ನಿಯಮಿಸಿದ ರೀತಿಯಲ್ಲಿ ಸರ್ಕಾರಿ ಖಜಾನೆಗೆ ಸಂದಾಯ ಮಾಡತಕ್ಕದ್ದು ಮತ್ತು ವಿವರಪಟ್ಟಿಕೆಯ ಜೊತೆಗೆ ಅಂಥ ಸಂದಾಯವನ್ನು ಸಾಕ್ಷೀಕರಿಸುವ ಖಜಾನೆಯಿಂದ ಪಡೆದ ರಸೀದಿಯನ್ನು ಒದಗಿಸತಕ್ಕದ್ದು.

xx xx xx

9. ತೆರಿಗೆಯ ಸಂದಾಯ ಮತ್ತು ವಸೂಲಿ.– (1) ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಂತುಗಳಲ್ಲಿ, ಯಾವುದಾದರೂ ಇದ್ದರೆ, ಮತ್ತು ಅಂಥ ಕಾಲದೊಳಗೆ ಸಂದಾಯ ಮಾಡತಕ್ಕದ್ದು.

xx xx xx

ಕರ್ನಾಟಕ ವ್ಯಾಪಾರಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲೆ ತೆರಿಗೆ ಅಧಿನಿಯಮ, 1976ರ
(1976ರ ಕರ್ನಾಟಕ ಅಧಿನಿಯಮ ಸಂಖ್ಯೆ 35) ಉದ್ಧೃತ ಭಾಗಗಳು

6. ವಿವರ ಪಟ್ಟಿಕೆ.--(1) 6ಎ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾಗಿರುವ ಪ್ರತಿಯೊಬ್ಬ ನಿಯೋಜಕನು, ತಾನು ಸಂದಾಯ ಮಾಡಿರುವ ಸಂಬಳವನ್ನು ಮತ್ತು ಮಜೂರಿಗಳನ್ನು ಮತ್ತು ಹಿಂದಿನ ವರ್ಷದ ಅವಧಿಯಲ್ಲಿ ಅದರ ಸಂಬಂಧದಲ್ಲಿ ತಾನು ಮುರುಗಡೆ ಮಾಡಿರುವ ತೆರಿಗೆಯ ಮೊಬಲಗನ್ನು ತೋರಿಸುವ ವಿವರ ಪಟ್ಟಿಕೆಯನ್ನು ನಿಯಮಿಸಲಾದ ನಮೂನೆಯಲ್ಲಿ ತೆರಿಗೆ ನಿರ್ಧರಣಾ ಪ್ರಾಧಿಕಾರಿಗೆ ವರ್ಷದ ಮುಕ್ತಾಯದ ಅರವತ್ತು ದಿನಗಳೊಳಗಾಗಿ ಒದಗಿಸತಕ್ಕದ್ದು.

(2) ಯಾರೇ ನಿಯೋಜಕನು (1)ನೇ ಉಪಪ್ರಕರಣದ ಮೇರೆಗೆ ಯಾವುದೇ ವಿವರ ಪಟ್ಟಿಕೆಯನ್ನು ಸಲ್ಲಿಸುವುದಕ್ಕೆ ಮುಂಚೆ, ಅಂಥ ವಿವರ ಪಟ್ಟಿಕೆಯ ಆಧಾರದ ಮೇಲೆ ಅವನು ಸಂದಾಯ ಮಾಡಬೇಕಾದ ಪೂರ್ಣ ಮೊಬಲಗಿನಿಂದ 6ಎ ಪ್ರಕರಣದ ಮೇರೆಗೆ ಈಗಾಗಲೇ ಸಂದಾಯ ಮಾಡಿರುವಷ್ಟು ತೆರಿಗೆಯನ್ನು ಕಡಿಮೆ ಮಾಡಿ, ಮುಂಚಿತವಾಗಿ, ಗೊತ್ತುಪಡಿಸಲಾದ ರೀತಿಯಲ್ಲಿ, ಸಂದಾಯ ಮಾಡತಕ್ಕದ್ದು. ಆ ವಿವರ ಪಟ್ಟಿಕೆಯ ಜೊತೆ ಅಂಥ ತೆರಿಗೆಯನ್ನು ಸಂದಾಯ ಮಾಡಿರುವ ಬಗ್ಗೆ ತೃಪ್ತಿಕರ ರುಜುವಾತನ್ನು ಒದಗಿಸತಕ್ಕದ್ದು. ಸಂದಾಯ ಮಾಡಿರುವ ಬಗ್ಗೆ ಪುರಾವೆ ಇಲ್ಲದ ವಿವರ ಪಟ್ಟಿಕೆಯನ್ನು ದಾಖಲ್ಮಾಡಲಾಗಿದೆಯೆಂದು ಭಾವಿಸತಕ್ಕದ್ದಲ್ಲ. ಅಂತಿಮವಾಗಿ ತೆರಿಗೆ ನಿರ್ಧರಣೆಯನ್ನು ಮಾಡಿದ ತರುವಾಯ ಹಾಗೆ ಸಂದಾಯ ಮಾಡಿದ ತೆರಿಗೆಯ ಮೊಬಲಗನ್ನು ಅಂತಿಮವಾಗಿ ನಿರ್ಧರಣೆ ಮಾಡಿದ ತೆರಿಗೆಯ ಸಂಬಂಧದಲ್ಲಿ ಸಂದಾಯ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

xx xx xx

6ಎ. ಮುಂಗಡವಾಗಿ ತೆರಿಗೆಯ ಸಂದಾಯ.– (1) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಪ್ರತಿಯೊಬ್ಬ ನಿಯೋಜಕನು, ಗೊತ್ತುಪಡಿಸಲಾದ ನಮೂನೆಯಲ್ಲಿ ಆ ತಿಂಗಳ ನಿಕಟ ಹಿಂದಿನ ತಿಂಗಳ ಅವಧಿಯಲ್ಲಿ ತಾನು ಸಂದಾಯ ಮಾಡಿದ ಸಂಬಳ ಮತ್ತು

ಮಜೂರಿಗಳನ್ನು ಮತ್ತು ಆ ಸಂಬಂಧದಲ್ಲಿ ತಾನು ಕಡಿತ ಮಾಡಿದ ತೆರಿಗೆಯ ಮೊಬಲಗನ್ನು ತೋರಿಸುವ ಒಂದು ವಿವರ ಪತ್ರವನ್ನು ತಿಂಗಳ ಮುಕ್ತಾಯದ ಇಪ್ಪತ್ತು ದಿನಗಳೊಳಗೆ ತೆರಿಗೆ ನಿರ್ಧರಣಾ ಪ್ರಾಧಿಕಾರಿಗೆ ಒದಗಿಸತಕ್ಕದ್ದು.

ಪರಂತು, ಒಂದು ತಿಂಗಳಲ್ಲಿ ಮುರುಗಡೆ ಮಾಡಿರುವ ತೆರಿಗೆಯ ಮೊಬಲಗು ಐದು ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಿಲ್ಲದಿರುವಲ್ಲಿ, ನೋಂದಾಯಿತ ನಿಯೋಜಕನು, ತಾನು ಸಂದಾಯ ಮಾಡಿರುವ ಸಂಬಳ ಮತ್ತು ಮಜೂರಿಗಳನ್ನು ಮತ್ತು ನಿಕಟ ಹಿಂದಿನ ತ್ರೈಮಾಸಿಕದ ಅವಧಿಯಲ್ಲಿ ಆ ಸಂಬಂಧದಲ್ಲಿ ತಾನು ಮುರುಗಡೆ ಮಾಡಿರುವ ಮೊಬಲಗನ್ನು ತೋರಿಸುವ ವಿವರ ಪತ್ರವನ್ನು ತ್ರೈಮಾಸಿಕವು ಮುಕ್ತಾಯವಾಗುವ ಇಪ್ಪತ್ತು ದಿನಗಳೊಳಗಾಗಿ ಒದಗಿಸತಕ್ಕದ್ದು.

ವಿವರಣೆ.– ಈ ಪರಂತುಕದ ಉದ್ದೇಶಕ್ಕಾಗಿ "ತ್ರೈಮಾಸಿಕ" ಎಂದರೆ ಮೇ ತಿಂಗಳ 31ನೇ ದಿನದಂದು, ಆಗಸ್ಟ್ ತಿಂಗಳ 31ನೇ ದಿನದಂದು, ನವೆಂಬರ್ ತಿಂಗಳ 30ನೇ ದಿನದಂದು, ಫೆಬ್ರವರಿ ತಿಂಗಳ 28ನೇ ದಿನದಂದು ಅಥವಾ 29ನೇ ದಿನದಂದು ಕೊನೆಗೊಳ್ಳುವ ಮೂರು ತಿಂಗಳುಗಳ ಅವಧಿ

(2) ಅಂಥ ಪ್ರತಿಯೊಂದು ವಿವರ ಪತ್ರದ ಜೊತೆಗೆ ಆ ವಿವರ ಪತ್ರಕ್ಕೆ ಅನುಸಾರವಾಗಿ ಬಾಕಿ ಇರುವ ತೆರಿಗೆಯ ಪೂರ್ಣ ಮೊಬಲಗನ್ನು ಸಂದಾಯ ಮಾಡಿದ ಬಗ್ಗೆ ರುಜುವಾತಿಗಾಗಿ ಖಜಾನೆಯ ಚಲನ್ ಇರತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದುದಕ್ಕೆ ರುಜುವಾತು ಇಲ್ಲದ ವಿವರ ಪತ್ರವನ್ನು ಕ್ರಮಬದ್ಧವಾಗಿ ದಾಖಲು ಮಾಡಲಾದ ವಿವರ ಪತ್ರವೆಂದು ಭಾವಿಸತಕ್ಕದ್ದಲ್ಲ ಮತ್ತು ಹಾಗೆ ಸಂದಾಯ ಮಾಡಬೇಕಾದ ಮೊಬಲಗನ್ನು 11ನೇ ಪ್ರಕರಣದ ಮತ್ತು 13ನೇ ಪ್ರಕರಣದ ಉದ್ದೇಶಕ್ಕಾಗಿ, ಅಂಥ ನಿಯೋಜನಕನಿಂದ ಈ ಅಧಿನಿಯಮದ ಮೇರೆಗೆ ಬಾಕಿ ಇರುವ ತೆರಿಗೆ ಎಂದು ಭಾವಿಸತಕ್ಕದ್ದು.

xx xx xx

10. ಹೆಸರು ದಾಖಲಿಸಿದ ವ್ಯಕ್ತಿಗಳ ತೆರಿಗೆಯನ್ನು ಸಂದಾಯ ಮಾಡುವುದು ಮತ್ತು ವಿವರ ಪತ್ರವನ್ನು ದಾಖಲ್ಮಾಡುವುದು ಮತ್ತು ಹೆಸರು ದಾಖಲಿಸಿದ ಕೆಲವು ವ್ಯಕ್ತಿಗಳ ಸಂದರ್ಭದಲ್ಲಿ ತೆರಿಗೆಯ ಮುರುಗಡೆ.– (1) ಹೆಸರು ದಾಖಲಿಸಿದ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ

ಅವನು ಸಂದಾಯ ಮಾಡಬೇಕಾದ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ, ತೆರಿಗೆ ನಿರ್ಧರಣಾ ಪ್ರಾಧಿಕಾರಿಯು ಮುಂದೆ, ತನ್ನ ವಿವರ ಪಟ್ಟಿಕೆಯನ್ನು ದಾಖಿಲ್ಮಾಡತಕ್ಕದ್ದು.

ಪರಂತು, ಪಟ್ಟಿಗೆ ಹೆಸರು ದಾಖಿಲು ಮಾಡಿಕೊಳ್ಳಲು ಹೊಣೆಗಾರನಾದ ವ್ಯಕ್ತಿಯು ಹಾಗೆ ಹೆಸರು ದಾಖಿಲಿಸಿಕೊಳ್ಳದೇ ಇದ್ದರೂ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಸಂದಾಯದ ಉದ್ದೇಶಕ್ಕಾಗಿ ಹೆಸರು ದಾಖಿಲು ಮಾಡಿಸಿಕೊಂಡವನು ಎಂದು ಭಾವಿಸತಕ್ಕದ್ದು.

xx xx xx

(5) (3)ನೇ ಉಪಪ್ರಕರಣದ ಮೇರೆಗೆ ಮುರುಗಡೆಯಲ್ಲಿ ಮಾಡುವ ವ್ಯಕ್ತಿಯು, ಪ್ರತಿ ತಿಂಗಳು ಅಧಿಕಾರ ವ್ಯಾಪ್ತಿಯುಳ್ಳ ತೆರಿಗೆ ನಿರ್ಧರಣಾ ಪ್ರಾಧಿಕಾರಿಗೆ ನಿಯಮಿಸಲಾದ ನಮೂನೆಯಲ್ಲಿ, ಹಿಂದಿನ ತಿಂಗಳ ಅವಧಿಯಲ್ಲಿ ತೆರಿಗೆಯನ್ನು ಮುರುಗಡೆ ಮಾಡಿದ ವಿವರಗಳನ್ನು ಒಳಗೊಂಡಿರುವ ವಿವರ ಪತ್ರವನ್ನು ಕಳುಹಿಸತಕ್ಕದ್ದು. ಅಂಥ ಮುರುಗಡೆಯನ್ನು ಮಾಡಿದ ಹಿಂದಿನ ತಿಂಗಳ ಮುಕ್ತಾಯದ ತರುವಾಯ ಇಪ್ಪತ್ತು ದಿನಗಳೊಳಗಾಗಿ ತಾನು ಹಾಗೆ ಮುರುಗಡೆ ಮಾಡಿದ ತೆರಿಗೆಯ ಪೂರ್ಣ ಮೊಬಲಗನ್ನು ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಬೇಕಾದ ಮೊಬಲಗನ್ನು 13ನೇ ಪ್ರಕರಣದ ಉದ್ದೇಶಗಳಿಗಾಗಿ ಈ ಅಧಿನಿಯಮದ ಮೇರೆಗೆ ಬಾಕಿ ಇರುವ ಮೊಬಲಗೆಂದು ಭಾವಿಸತಕ್ಕದ್ದು.

ಕರ್ನಾಟಕ ವಿಲಾಸಗಳ ಮೇಲೆ ತೆರಿಗೆ ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ ಸಂಖ್ಯೆ 22)

ಉದ್ಧೃತ ಭಾಗ

xx xx xx

3. ಹೋಟೆಲಿನಲ್ಲಿ ಒದಗಿಸಲಾದ ವಿಲಾಸಗಳ ಮೇಲೆ ತೆರಿಗೆ ವಿಧಿಸುವಿಕೆ ಮತ್ತು ಸಂಗ್ರಹಣೆ.– ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಹೋಟೆಲಿನಲ್ಲಿ ಪ್ರತಿಯೊಂದು ಕೊಠಡಿಗೆ ಸಂಬಂಧಿಸಿದಂತೆ,

ಒದಗಿದ ಭೋಗವಸ್ತುವಿನ ಮೇಲೆ ಈ ಕೆಳಕಂಡದರದಲ್ಲಿ (ವಿಲಾಸಗಳ ಮೇಲೆ ತೆರಿಗೆ ಎಂದು ಕರೆಯಲಾಗುವ) ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು, ಎಂದರೆ:

(ಎ)	ಪ್ರತಿ ಕೊಠಡಿಗೆ ಪ್ರತಿದಿನಕ್ಕೆ ವಸತಿ ಗಾಗಿನ ಚಾರ್ಜುಗಳು ಒಂದುನೂರು ರೂಪಾಯಿಗಳಿ ಗಿಂತ ಕಡಿಮೆಯಲ್ಲದ್ದು ಆದರೆ ಒಂದು ನೂರಾ ಐವತ್ತು ರೂಪಾಯಿಗಳಿಗಿಂತ ಕಡಿಮೆಯಾಗಿರುವಲ್ಲಿ;	ಅಂಥ ಚಾರ್ಜುಗಳ ಶೇಕಡಾ ಐದರಷ್ಟು
(ಬಿ)	ಪ್ರತಿ ಕೊಠಡಿಗೆ ಪ್ರತಿದಿನಕ್ಕೆ ವಸತಿಗಾಗಿನ ಚಾರ್ಜುಗಳು ಎರಡು ನೂರು ರೂಪಾಯಿ ಗಳಿಗಿಂತ ಕಡಿಮೆಯಲ್ಲದ, ಆದರೆ ನಾಲ್ಕು ನೂರು ರೂಪಾಯಿಗಳಿಗಿಂತ ಕಡಿಮೆಯಾ ಗಿರುವಲ್ಲಿ;	ಅಂಥ ಚಾರ್ಜುಗಳ ಶೇಕಡಾ ಹತ್ತರಷ್ಟು
(ಸಿ)	ಪ್ರತಿ ಕೊಠಡಿಗೆ ಪ್ರತಿದಿನಕ್ಕೆ ವಸತಿ ಗಾಗಿನ ಚಾರ್ಜುಗಳು ಎರಡು ನೂರು ರೂಪಾಯಿ ಗಳಿಗಿಂತ ಕಡಿಮೆಯಾಗಿರದಿದ್ದಲ್ಲಿ	ಅಂಥ ಚಾರ್ಜುಗಳ ಶೇಕಡಾ ಹನ್ನೆರಡುವರೆರಷ್ಟು

XX XX XX

5. ವಿವರ ಪಟ್ಟಿ.– (1) 5ಎ ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದಡಿ ತೆರಿಗೆ ಸಂದಾಯ ಮಾಡಲು ಬದ್ಧನಾದ ಪ್ರತಿಯೊಬ್ಬ ಮಾಲೀಕನು ವರ್ಷ ಮುಕ್ತಾಯವಾದ ಅರವತ್ತು ದಿನಗಳೊಳಗಾಗಿ ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ನಿಯಮಿತ ನಮೂನೆಯಲ್ಲಿ ವಿವರಪಟ್ಟಿಯನ್ನು ಸಲ್ಲಿಸತಕ್ಕದ್ದು.

(2) ಯಾವೊಬ್ಬ ಮಾಲೀಕನು (1)ನೇ ಉಪ–ಪ್ರಕರಣದ ಅಡಿಯಲ್ಲಿ ಯಾವುದೇ ವಿವರ ಪಟ್ಟಿಕೆಗಳನ್ನು ಸಲ್ಲಿಸುವುದಕ್ಕೆ ಮುಂಚೆನ, 5–ಎ ಪ್ರಕರಣದ ಅಡಿಯಲ್ಲಿ ಈಗಾಗಲೇ ಸಂದಾಯ ಮಾಡಲಾಗಿರುವ ಯಾವುದೇ ತೆರಿಗೆಯನ್ನು ಕಡಿಮೆ ಮಾಡಿರುವ ಅಂಥ ವಿವರ ಪಟ್ಟಿಕೆಗೆ ಅನುಸಾರವಾಗಿ ಸಂದಾಯ ಮಾಡಬೇಕಾಗಿರುವ ತೆರಿಗೆಯ ಪೂರ್ಣ ಮೊಬಲಗನ್ನು ನಿಯಮಿಸಲಾದ ರೀತಿಯಲ್ಲಿ ಮುಂಗಡವಾಗಿ ಸಂದಾಯ ಮಾಡತಕ್ಕದ್ದು

ಮತ್ತು ಅಂಥ ತೆರಿಗೆ ಸಂದಾಯ ಮಾಡಿದ ಅಂಥ ರುಜುವಾತು ಇಲ್ಲದ ವಿವರ ಪಟ್ಟಿಕೆಯನ್ನು ಕ್ರಮಬದ್ಧವಾಗಿ ದಾಖಲು ಮಾಡಲಾದ ವಿವರ ಪಟ್ಟಿಕೆಯೊಂದು ಪರಿಗಣಿಸತಕ್ಕದ್ದಲ್ಲ. ಅಂತಿಮ ತೆರಿಗೆ ನಿರ್ಧರಣೆ ಮಾಡಿದ ನಂತರ, ಹಾಗೆ ಸಂದಾಯ ಮಾಡಲಾದ ತೆರಿಗೆ ಮೊಬಲಗನ್ನು ಅಂತಿಮವಾಗಿ ನಿರ್ಧರಣೆ ಮಾಡಿದ ತೆರಿಗೆ ಮೊಬಲಗಿಗೆ ಸಂಬಂಧಿಸಿದಂತೆ ಸಂದಾಯ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

xx xx xx

5–ಎ. ತೆರಿಗೆಯನ್ನು ಮುಂಗಡವಾಗಿ ಸಂದಾಯ ಮಾಡುವುದು.– (1) ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಸಂದಾಯ ಮಾಡಲು ಬದ್ಧನಾಗುವ ಪ್ರತಿಯೊಬ್ಬ ಮಾಲೀಕನು ಅಥವಾ ದಾಸ್ತಾನುದಾರನು ಒಂದು ತಿಂಗಳು ಮುಗಿದ ಇಪ್ಪತ್ತು ದಿನಗಳ ಒಳಗೆ, ಅಂಥ ವಿವರಣೆಯ ಅನುಸಾರವಾಗಿ ಅವನಿಂದ ಬಾಕಿ ಇರುವ ತೆರಿಗೆಯ ಪೂರ್ಣ ಮೊಬಲಗನ್ನು ತೋರಿಸುವ ವಿವರಣೆಯಲ್ಲಿ ನಿಯಮಿಸಲಾದ ನಮೂನೆಯಲ್ಲಿ ತೆರಿಗೆ ನಿರ್ಧರಣೆ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು.

(2) (1)ನೆ ಉಪ–ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ವಿವರಣೆಯ ಜೊತೆಗೆ ಆ ವಿವರಣೆಗೆ ಅನುಸಾರವಾಗಿ ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣ ಮೊಬಲಗನ್ನು ಸಂದಾಯ ಮಾಡಿದ ಬಗ್ಗೆ ರುಜುವಾತಿಗಾಗಿ ಖಜಾನೆಯ ಚಲವನ್ನು ಇರಿಸತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದುದಕ್ಕೆ ಅಂಥ ರುಜುವಾತು ಇಲ್ಲದ ವಿವರಣೆಯನ್ನು ಕ್ರಮಬದ್ಧವಾಗಿ ದಾಖಲು ಮಾಡಲಾದ ವಿವರಣೆಯೆಂದು ಪರಿಗಣಿಸತಕ್ಕದ್ದಲ್ಲ ಮತ್ತು 7 ಮತ್ತು 8ನೇ ಪ್ರಕರಣಗಳ ಉದ್ದೇಶಕ್ಕಾಗಿ, ಈ ಅಧಿನಿಯಮದ ಅಡಿಯಲ್ಲಿ ಅಂಥ ಮಾಲೀಕನಿಂದ ಅಥವಾ ದಾಸ್ತಾನುದಾರನಿಂದ ಬಾಕಿ ಇರುವ ತೆರಿಗೆ ಎಂಬುದಾಗಿ ಭಾವಿಸತಕ್ಕದ್ದು.

xx xx xx

8. ತೆರಿಗೆ ಮತ್ತು ದಂಡದ ಸಂದಾಯ.– (1) (ಎ) (i) ತೆರಿಗೆಗಾಗಿನ ಪೂರ್ಣ ಸಂದಾಯವನ್ನು ಮಾಡದೆ ವಿವರಪಟ್ಟಿಕೆಗಳನ್ನು ಒದಗಿಸದೆ ಇರುವಲ್ಲಿ, ಬರಬೇಕಾದ ತೆರಿಗೆ ಮೊಬಲಗನ್ನು,

(ii) ಯಾವುದೇ ಅವಧಿಗೆ ಸಂಬಂಧಿಸಿದಂತೆ ಮಾಲೀಕನು ಈಗಾಗಲೇ ಸಂದಾಯ ಮಾಡಿದ ಯಾವುದೇ ಮೊತ್ತವನ್ನು ಕಳೆದು ಅಂಥ ಅವಧಿಗಾಗಿ ನಿರ್ಧರಿಸಿದ ತೆರಿಗೆಯ ಮೊಬಲಗನ್ನು;

(ಬಿ) ಈ ಅಧಿನಿಯಮದ ಮೇರೆಗೆ ವಿಧಿಸಿದ ದಂಡದ ಮೊಬಲಗು ಯಾವುದಾದರೂ ಇದ್ದರೆ ಅದನ್ನು ಮಾಲೀಕನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಈ ಉದ್ದೇಶಕ್ಕಾಗಿ ಬೋಗವಸ್ತು ತೆರಿಗೆ ಅಧಿಕಾರಿಯ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನೋಟೀಸಿನ ಜಾರಿ ದಿನಾಂಕ ದಿಂದ ಮೂವತ್ತು ಮೀರದ ದಿನಾಂಕವಾದ ದಿನಾಂಕದೊಳಗೆ ಸಂದಾಯ ಮಾಡತಕ್ಕದ್ದು.

xx xx xx

11–ಎ. ಉಚ್ಚ ನ್ಯಾಯಾಲಯದಿಂದ ಪುನರೀಕ್ಷಣೆ.– (1) (11)ನೇ ಪ್ರಕರಣದಡಿ ಆದೇಶವನ್ನು ಕಳುಹಿಸಲಾದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ, ಇದರಿಂದ ತೊಂದರೆಗೊಳಗಾದ ಯಾರೇ ಪಕ್ಷಕಾರನು ಆದೇಶದ ವಿರುದ್ಧವಾಗಿ, ಅಪೀಲು ವಿಚಾರಣಾ ನ್ಯಾಯಾಧಿಕರಣವು ಯಾವುದೇ ಕಾನೂನಿನ ಪ್ರಶ್ನೆಯ ಬಗ್ಗೆ ನಿರ್ಣಯ ನೀಡುವಲ್ಲಿ ವಿಫಲ ಗೊಂಡಿದೆಯೆಂದಾಗಲೀ ಅಥವಾ ದೋಷಪೂರ್ಣವಾಗಿ ನಿರ್ಣಯ ನೀಡಿದೆಯೆಂಬ ಕಾರಣದ ಮೇಲೆ, ಉಚ್ಚ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

ಪರಂತು, ಉಚ್ಚ ನ್ಯಾಯಾಲಯವು ಮೇಲೆತಿಳಿಸಲಾದ ಅರವತ್ತು ದಿನಗಳ ಅವಧಿಯ ತರುವಾಯ ಸಲ್ಲಿಸಲಾದ ಅರ್ಜಿಯನ್ನು, ಅರ್ಜಿದಾರನು ಆ ಅವಧಿಯೊಳಗೆ ಅರ್ಜಿಯನ್ನು, ಅರ್ಜಿದಾರನು ಆ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸದೇ ಇರುವುದಕ್ಕೆ ಸಾಕಷ್ಟು ಕಾರಣಗಳಿದ್ದವು ಎಂಬುದು ಅದಕ್ಕೆ ಮನದಟ್ಟಾದಲ್ಲಿ ಒಪ್ಪಿಕೊಳ್ಳಬಹುದು.

xx xx xx

ಕರ್ನಾಟಕ ಸರಕುಗಳ ಪ್ರವೇಶದ ಮೇಲೆ ತೆರಿಗೆ ಅಧಿನಿಯಮ, 1979ರ (1979ರ ಕರ್ನಾಟಕ ಅಧಿನಿಯಮ ಸಂಖ್ಯೆ 27) ಉದ್ಧೃತ ಭಾಗ

xx xx xx

5. ವಿವರಪಟ್ಟಿಕೆಗಳು ಮತ್ತು ಕರ ನಿರ್ಧರಣೆ.– (1) 7ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ನೋಂದಾಯಿತನಾದ ಪ್ರತಿಯೊಬ್ಬ ವ್ಯಾಪಾರಿಯು ಮತ್ತು ಈ ಅಧಿನಿಯಮದ ಅಡಿಯಲ್ಲಿ ಸ್ವತಃ ನೋಂದಾಯಿತನಾಗಲು ಬದ್ಧನಾದ ಪ್ರತಿಯೊಬ್ಬ ವ್ಯಾಪಾರಿಯ ಪ್ರತಿವರ್ಷ ನಿಯಮಿಸಬಹುದಾದಂಥ ಅವಧಿಯೊಳಗೆ ಮತ್ತು ಅಂಥ ರೀತಿಯಲ್ಲಿ ಅಂಥ ವಿವರಗಳೊಂದಿಗೆ ಕರ ನಿರ್ಧಾರಣಾ ಪ್ರಾಧಿಕಾರಿಗೆ ವಿವರಪಟ್ಟಿಕೆಯನ್ನು ಸಲ್ಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವನೇ ವ್ಯಾಪಾರಿಯು ಯಾವುದೇ ವಿವರಪಟ್ಟಿಯನ್ನು ಸಲ್ಲಿಸುವುದಕ್ಕೆ ಮುಂಚೆ ಅವನು 7ನೇ ಪ್ರಕರಣದ ಮೇರೆಗೆ ಈಗಾಗಲೇ ಸಂದಾಯ ಮಾಡಿದ ಯಾವುದೇ ತೆರಿಗೆಯನ್ನು ಕಡಿಮೆ ಮಾಡಲಾದಂತೆ ಅಂಥ ವಿವರಪಟ್ಟಿಕೆಯ ಆಧಾರದ ಮೇಲೆ ಅವನು ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣ ಮೊಬಲಗನ್ನು ಮುಂಗಡವಾಗಿ ನಿಯಮಿಸಿದ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು ಮತ್ತು ವಿವರಪಟ್ಟಿಕೆಯ ಜೊತೆಗೆ ಅಂಥ ತೆರಿಗೆ ಸಂದಾಯದ ಬಗ್ಗೆ ತೃಪ್ತಿಕರವಾದ ರುಜುವಾತನ್ನು ಒದಗಿಸತಕ್ಕದ್ದು. ಅಂತಿಮ ಕರ ನಿರ್ಧರಣೆಯನ್ನು ಮಾಡಿದ ತರುವಾಯ ಹಾಗೆ ಸಂದಾಯ ಮಾಡಿದ ತೆರಿಗೆಯ ಮೊಬಲಗನ್ನು ಅಂತಿಮವಾಗಿ ಕರ ನಿರ್ಧರಣೆ ಮಾಡಿದ ತೆರಿಗೆಯ ಬಗ್ಗೆ ಸಂದಾಯ ಮಾಡಿರುವುದಾಗಿ ಭಾವಿಸತಕ್ಕದ್ದು.

xx xx xx

7. ಮುಂಗಡವಾಗಿ ತೆರಿಗೆಯ ಸಂದಾಯ.– (1) ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಪ್ರತಿಯೊಬ್ಬ ನೊಂದಾಯಿತ ವ್ಯಾಪಾರಿಯು (ಈ ಅಧಿನಿಯಮದಡಿ ತನ್ನನ್ನು ನೊಂದಾಯಿಸಿಕೊಳ್ಳಲು ಬದ್ಧನಾಗಿರುವಂಥ ಪ್ರತಿಯೊಬ್ಬ ವ್ಯಾಪಾರಿಯು) ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರುವ ಹೇಳಿಕೆಯನ್ನು ಪ್ರತಿ ತಿಂಗಳೂ ತೆರಿಗೆ ನಿರ್ಧರಣೆ ಪ್ರಾಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಸ್ಥಳೀಯ ಪ್ರದೇಶದೊಳಗೆ ಹಿಂದಿನ ತಿಂಗಳ ಅವಧಿಯಲ್ಲಿ ತಾನು ತಂದಿರುವ (ಸರಕುಗಳ) ಆಧಾರದ

ಮೇಲೆ ತಾನು ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣ ಮೊಬಲಗನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಬೇಕಾದ ಮೊಬಲಗನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಬೇಕಾದ ಮೊಬಲಗನ್ನು, 8ನೇ ಪ್ರಕರಣದ (4)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ ಅಂಥ ವ್ಯಾಪಾರಿಯಿಂದ ಈ ಅಧಿನಿಯಮದಡಿ ಬಾಕಿಯಿರುವ ಮೊಬಲಗು ಎಂಬುದಾಗಿ ಪರಿಗಣಿಸತಕ್ಕದ್ದು.

ಪರಂತು, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 25) ಅಥವಾ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003 (2004ರ ಕರ್ನಾಟಕ ಅಧಿನಿಯಮ 32) ಇವುಗಳಡಿಯಲ್ಲಿ ಯಾವುದೇ ವರ್ಷದಲ್ಲಿ ಒಬ್ಬ ವ್ಯಾಪಾರಿಯ ವಹಿವಾಟಿನಿಂದ ಬಂದ ಹಣವು ಐವತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿಲ್ಲದಿದ್ದ ಸಂದರ್ಭದಲ್ಲಿ, ಆತನು ಪ್ರತಿಯೊಂದು ತಿಂಗಳಿಗೆ ಈ ಉಪ ಪ್ರಕರಣದ ಅನುಸಾರವಾಗಿ ತ್ರೈಮಾಸಿಕವಾಗಿ ವಿವರಪಟ್ಟಿಕೆಗಳನ್ನು ಸಲ್ಲಿಸತಕ್ಕದ್ದು ಮತ್ತು ಅಂಥ ತೆರಿಗೆ ಸಂಬಂಧದಲ್ಲಿ ಆ ತ್ರೈಮಾಸಿಕವು ಮುಕ್ತಾಯವಾದ ತರುವಾಯ ಇಪ್ಪತ್ತು ದಿನಗಳೊಳಗೆ ಪ್ರತಿಯೊಂದು ತ್ರೈಮಾಸಿಕಕ್ಕೆ ಪಾವತಿಸಬೇಕಾದ ತೆರಿಗೆ ಪೂರ್ಣ ಮೊತ್ತವನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು.

xx xx xx

8. ತೆರಿಗೆ ಸಂದಾಯ ಮತ್ತು ವಸೂಲಿ.– (1) ಈ ಅಧಿನಿಯಮ ಮೇರೆಗಿನ ತೆರಿಗೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಂತುಗಳಲ್ಲಿ ಯಾವುದಾದರೂ ಇದ್ದರೆ ಮತ್ತು ಅಂಥ ಕಾಲದೊಳಗೆ ಸಂದಾಯಮಾಡತಕ್ಕದ್ದು.

xx xx xx

8ಎ. ಕೆಲವು ಪ್ರಕರಣಗಳಲ್ಲಿ ಮರುಪಾವತಿಯನ್ನು ತಡೆಹಿಡಿಯುವುದು.– (1) ಒಂದು ಅಪೀಲಿನ ಅಥವಾ ಮುಂದಿನ ವ್ಯವಹರಣೆಯ ಅಥವಾ ಈ ಅಧಿನಿಯಮದಡಿಯಲ್ಲಿ ಬಾಕಿ ಇರುವ ಯಾವುದೇ ಇತರ ವ್ಯವಹರಣೆಗಳಲ್ಲಿ ವಿಷಯವು ಮರುಪಾವತಿಯ ಬಗ್ಗೆ ಆದೇಶವಿದ್ದಲ್ಲಿ, ಮತ್ತು ಮರುಪಾವತಿಯನ್ನು ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರವು ಅಂಥ

ಮರುಪಾವತಿಯನ್ನು ಮಂಜೂರು ಮಾಡಿದಲ್ಲಿ ರಾಜಸ್ವಕ್ಕೆ ವ್ಯತಿರಿಕ್ತವಾದ ಪರಿಣಾಮ ಬೀರುತ್ತದೆ ಎಂದು ಅಭಿಪ್ರಾಯ ಹೊಂದಿದ್ದಲ್ಲಿ, ಅಂಥ ಪ್ರಾಧಿಕಾರವು ಆಯುಕ್ತರ ಪೂರ್ವಾನುಮೋದನೆಯೊಂದಿಗೆ, ಆಯುಕ್ತರು ನಿರ್ಧರಿಸಬಹುದಾದಂಥ ಅವಧಿಯವರೆಗೆ ಮರುಪಾವತಿಯನ್ನು ತಡೆಹಿಡಿಯುವುದು.

(2) ಒಂದನೇ ಉಪ ಪ್ರಕರಣದಡಿಯಲ್ಲಿ ಮರುಪಾವತಿಯನ್ನು ತಡೆಹಿಡಿದಿದ್ದಲ್ಲಿ, ರಾಜ್ಯ ಸರ್ಕಾರವು, (1)ನೇ ಉಪ ಪ್ರಕರಣದಡಿಯಲ್ಲಿ ಮರುಪಾವತಿಯ ದಿನಾಂಕಕ್ಕೆ ಉಲ್ಲೇಖವಾದ ಆದೇಶದ ದಿನಾಂಕದಿಂದ ತೊಂಬತ್ತು ದಿನಗಳ ಮುಕ್ತಾಯವಾದ ನಿಕಟವಾದ ದಿನಾಂಕದಿಂದ ಅವಧಿಗೆ, ಅಪೀಲು ಅಥವಾ ಇತರ ವ್ಯವಹರಣೆಗಳಿಂದಾಗಿ ವ್ಯಕ್ತಿಗೆ ಬಾಕಿ ಇರುವ ಅಂತಿಮವಾಗಿ ನಿರ್ಧರಿಸಬಹುದಾದ ಮರುಪಾವತಿಯ ಮೊತ್ತದ ಮೇಲೆ ವರ್ಷಕ್ಕೆ ಶೇಕಡ ಆರರ ದರದಲ್ಲಿ ಬಡ್ಡಿಯನ್ನು ಪಾವತಿಸತಕ್ಕದ್ದು.

xx xx xx

12ಸಿ. ಸ್ಪಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳು.– (1) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 25) (ಇಲ್ಲಿ ಇನ್ನು ಮುಂದೆ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) 4ನೇ ಪ್ರಕರಣ ಅಡಿಯಲ್ಲಿ ರಚಿಸಲಾದ "ಸ್ಪಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರ" (ಈ ಅಧಿನಿಯಮದಲ್ಲಿ ಇನ್ನು ಮುಂದೆ ಪ್ರಾಧಿಕಾರ ಎಂದು ಉಲ್ಲೇಖಿಸಲಾಗಿದೆ) ಯಾವುದೇ ಸರಕುಗಳ ಸಂಬಂಧದಲ್ಲಿ ತೆರಿಗೆಯ ದರದ ಬಗ್ಗೆ ಅಥವಾ ಯಾವುದೇ ವ್ಯವಹರಣೆಯಲ್ಲಿ ತೆರಿಗೆ ಬದ್ಧತೆಯ ಬಗ್ಗೆ, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ವ್ಯಾಪಾರಿಯಿಂದ ಅರ್ಜಿಯನ್ನು ಸ್ವೀಕರಿಸಿದ ನಂತರ, ಈ ಅಧಿನಿಯಮದ ಅಡಿಯಲ್ಲಿ ಅನ್ವಯವಾಗುವ ತೆರಿಗೆಯ ದರಗಳ ಸ್ಪಷ್ಟೀಕರಣ ನೀಡಲು ಪ್ರಾಧಿಕಾರಿಸತಕ್ಕದ್ದು.

xx xx xx